# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಫೆಬ್ರವರಿ 15, 2021

ಸಂಪುಟ : 47 ಸಂಚಿಕೆ : 287 ☎ 254736 ✆ 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಇಂದಿನಿಂದ ಫಾಸ್‌ಟ್ಯಾಗ್ ಕಡ್ಡಾಯ ಇಲ್ಲದಿದ್ದರೆ ಎರಡು ಪಟ್ಟು ಟೋಲ್



ನವದೆಹಲಿ, ಫೆ. 14 – ನಾಳೆ ಸೋಮವಾರ ಮಧ್ಯರಾತ್ರಿಯಿಂದ ಫಾಸ್‌ಟ್ಯಾಗ್ ಕಡ್ಡಾಯವಾಗಲಿದೆ. ದೇಶಾದ್ಯಂತ ಎಲೆಕ್ಟ್ರಾನಿಕ್ ಟೋಲ್ ಪ್ಲಾಜಾಗಳಲ್ಲಿ ಫಾಸ್‌ಟ್ಯಾಗ್ ಬಳಸಬೇಕಿದ್ದು, ಇದು ಹೊಂದಿಲ್ಲದವರು ಎರಡು ಪಟ್ಟು ಹೆಚ್ಚಿನ ಶುಲ್ಕ ಪಾವತಿಸಬೇಕಿದೆ.

ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಈ ಬಗ್ಗೆ ಹೇಳಿಕೆ ನೀಡಿದ್ದು, ರಾಷ್ಟ್ರೀಯ ಹೆದ್ದಾರಿಗಳು ಫಾಸ್‌ಟ್ಯಾಗ್ ಮೂಲಕವೇ ಟೋಲ್ ಸಂಗ್ರಹಿಸಬೇಕೆಂದು ತಿಳಿಸಿದೆ.

ಎನ್.ಹೆಚ್. ಶುಲ್ಕ ನಿಯಮ 2008ರ ಅನ್ವಯ ವಾಹನಗಳು ಫಾಸ್‌ಟ್ಯಾಗ್ ಹೊಂದುವುದು ಕಡ್ಡಾಯವಾಗಿದೆ. ಡಿಜಿಟಲ್ ಪಾವತಿಗೆ ಉತ್ತೇಜನ ನೀಡಲು, ಕಾಯುವ ಸಮಯ ಕಡಿಮೆ ಮಾಡಲು ಹಾಗೂ ಇಂಧನ ಬಳಕೆ ಕಡಿಮೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

ಜನವರಿ 1, 2021ರಿಂದ ಫಾಸ್‌ಟ್ಯಾಗ್ ಬಳಕೆಯನ್ನು ಸಚಿವಾಲಯ ಕಡ್ಡಾಯಗೊಳಿಸಿತ್ತು.

## ಅಡುಗೆ ಅನಿಲ ಸಿಲಿಂಡರ್ ಬೆಲೆ 50 ರೂ. ಹೆಚ್ಚಳ

ನವದೆಹಲಿ, ಫೆ. 14 – ಅಡುಗೆ ಅನಿಲದ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 50 ರೂ.ಗಳಷ್ಟು ಹೆಚ್ಚಿಸಲಾಗಿದೆ. ಸೋಮ ವಾರದಿಂದ ಹೆಚ್ಚಳವಾದ ಬೆಲೆ ಅನ್ವಯ ವಾಗಲಿದೆ ಎಂದು ಮೂಲಗಳು ತಿಳಿಸಿವೆ. ಫೆಬ್ರವರಿಯಲ್ಲಿ ಎರಡನೇ ಬಾರಿ ಬೆಲೆ ಹೆಚ್ಚಿಸಲಾಗಿದೆ. ಈ ಹಿಂದೆ ಫೆಬ್ರವರಿ 4ರಂದು ಮಹಾ ನಗರಗಳಲ್ಲಿ ಸಬ್ಸಿಡಿಯೇತರ ಅಡುಗೆ ಅನಿಲದ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 25 ರೂ.ಗಳಷ್ಟು ಹೆಚ್ಚಿಸಲಾಗಿತ್ತು.

## ಗಗನಕ್ಕೇರಿದ ಪೆಟ್ರೋಲ್ ಬೆಲೆ

ನವದೆಹಲಿ, ಫೆ. 14 – ಭಾನುವಾರ ರಾಜಸ್ಥಾನದಲ್ಲಿ ಲೀಟರ್ ಪೆಟ್ರೋಲ್ ಬೆಲೆ 99 ರೂ.ಗಳ ಗಡಿ ದಾಟಿದೆ. ಡೀಸೆಲ್ ಬೆಲೆ ಲೀಟರ್‌ಗೆ 91 ರೂ.ಗಳಿಗೆ ತಲುಪಿದೆ. ಸತತ ಆರನೇ ದಿನ ತೈಲ ಬೆಲೆ ಏರಿಕೆಯಾಗಿರುವುದರಿಂದ ಈ ಬೆಳವಣಿಗೆಯಾಗಿದೆ.

ಭಾನುವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 29 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 32 ಪೈಸೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ.

ರಾಜಸ್ಥಾನ ಸರ್ಕಾರ ಕಳೆದ ವಾರ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ವ್ಯಾಟ್ ತೆರಿಗೆಯನ್ನು ಲೀಟರ್‌ಗೆ 2 ರೂ. ಕಡಿತಗೊಳಿಸಿತ್ತು. ಇದಾದ ನಂತರವೂ ರಾಜ್ಯದಲ್ಲಿ ವ್ಯಾಟ್ ದರ ದೇಶದಲ್ಲೇ ಅತಿ ಹೆಚ್ಚಿನ ಶೇ.36 ರಷ್ಟಿದೆ. ಇದರ ಜೊತೆಗೆ ಪೆಟ್ರೋಲ್ ಮೇಲೆ ಪ್ರತಿ ಕಿಲೋಲೀಟರ್‌ಗೆ 1,500 ರೂ.ಗಳ ರಸ್ತೆ ಸೆಸ್ ವಿಧಿಸಲಾಗುತ್ತದೆ. ಡೀಸೆಲ್ ಮೇಲೆ ಶೇ.26ರ ವ್ಯಾಟ್ ಹಾಗೂ 1,750 ರೂ.ಗಳ ಸೆಸ್ ಇದೆ. (4ನೇ ಪುಟಕ್ಕೆ)

## ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿಸಲು ಮುನ್ನುಡಿ ಬರೆದಿದ್ದು ಕಾಂಗ್ರೆಸ್ : ಸಿದ್ದರಾಮಯ್ಯ

ಮೃತ್ಯುಂಜಯ ಪಾಟೀಲ್



ಹೊನ್ನಾಳಿ, ಫೆ.14- ನರಸಿಂಹಯ್ಯ ಸಮಿತಿ ವರದಿಯೊಂದಿಗೆ ಕಾಗೋಡು ತಿಮ್ಮಪ್ಪ ಕಂದಾಯ ಮಂತ್ರಿಯಾದಾಗ ತಮ್ಮ ಅವಧಿಯಲ್ಲಿ ಕಂದಾಯ ಗ್ರಾಮವನ್ನು ಕಾನೂನು ಮೂಲಕ ಘೋಷಿಸಿದ್ದು ನಮ್ಮ ಸರ್ಕಾರವೇ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪ ಸುಕ್ಷೇತ್ರದ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ್ ಸಮಿತಿ ಮತ್ತು ರಾಜ್ಯ ತಾಂಡಾಭಿವೃದ್ಧಿ ನಿಗಮ, ಬೆಂಗಳೂರು ಸಂತ ಸೇವಾಲಾಲ್ ಕ್ಷೇತ್ರ ಅಭಿವೃದ್ಧಿ ಮತ್ತು ನಿರ್ವಹಣಾ ಪ್ರತಿಷ್ಠಾನದ ವತಿಯಿಂದ ಸಂತ ಸೇವಾಲಾಲ್‌ರವರ 282ನೇ ಜಯಂತಿಯ ಉದ್ಘಾಟನಾ ಕಾರ್ಯಕ್ರಮಲ್ಲಿ ಅವರು ಮಾತನಾಡಿದರು.

ಕಂದಾಯ ಗ್ರಾಮ ಮಾಡಲು ಮಾಜಿ ಸಚಿವ ಶಿವಮೂರ್ತಿ ನಾಯ್ಕರವರೇ ಮೊದಲು ನಮಗೆ ಒತ್ತಾಯಿಸಿದ್ದು, ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುವಂದಿನಿಂದಲೂ ಸ್ನೇಹಿತರ ಸಲುಗೆ ಇದ್ದು, ಇದೀಗ ಯಾರೇ ತಾವು ಎಂದು ಹೇಳಿಕೊಂಡರು ಅದು ಸುಳ್ಳು. ಶಿವಮೂರ್ತಿಯವರೇ ಒತ್ತಾಯಿಸಿದವರಲ್ಲಿ ಮೊದಲಿಗರು ಎಂದರು.

ಇದೀಗ ಕಂದಾಯ ಗ್ರಾಮ ಘೋಷಣೆಯಾಗುತ್ತಿಲ್ಲ. ರಾಜೀವ್‌ರವರು ಇದನ್ನು ಮನಗಂಡು, ಅದು ಆಗಲೇಬೇಕು ಎಂಬುದು ನಮ್ಮ ಒತ್ತಾಯವಾಗಿದ್ದು ವಿಧಾನ ಸಭೆಯಲ್ಲಿ ಮುಂದಿನ ದಿನಗಳಲ್ಲಿ ನಿಮ್ಮ ಪರ ಒತ್ತಾಯಿಸುವೆ ಎಂದರು. (5ನೇ ಪುಟಕ್ಕೆ)

# ತಾಂಡಾಗಳ ಅಭಿವೃದ್ಧಿಗೆ ಕ್ರಮ

### ವರ್ಷದೊಳಗೆ ಎಲ್ಲಾ ತಾಂಡಾಗಳು ಕಂದಾಯ ಗ್ರಾಮಗಳಾಗಲಿವೆ: ಸಿಎಂ



ನ್ಯಾಮತಿ, ಫೆ. 14 - ಮುಂದಿನ ಒಂದು ವರ್ಷದಲ್ಲಿ ರಾಜ್ಯದಲ್ಲಿರುವ ಎಲ್ಲಾ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿಸುವ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನ್ಯಾಮತಿ ತಾಲ್ಲೂಕಿನ ಸೂರಗೊಂಡನ ಕೊಪ್ಪ ಭಾಯಾಗಢ್ ನ ಶ್ರೀ ಸಂತ ಸೇವಾಲಾಲ್ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ಸಂತ ಸೇವಾಲಾಲ್ ಕ್ಷೇತ್ರ ಅಭಿವೃದ್ಧಿ ಮತ್ತು ನಿರ್ವಹಣಾ ಪ್ರತಿಷ್ಠಾನ ಹಾಗೂ ಸಂತ ಸೇವಾಲಾಲ್ ಜನ್ಮಸ್ಥಳ ಮಹಾಮಠ ಸಮಿತಿ ಸಹಯೋಗದಲ್ಲಿ ಸಂತ ಸೇವಾಲಾಲ್ ಅವರ 282ನೇ ಜಯಂತ್ಯೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ, ಆಚಾರ-ವಿಚಾರ ಹೊಂದಿರುವ ಈ ಸಮಾಜ ತನ್ನ ಕಾಯಕ ನಿಷ್ಠೆಯಿಂದ ಶ್ರಮಿಕ ವರ್ಗವಾಗಿದ್ದು, ಬೇಡದೆ ದುಡಿದು ತಿನ್ನುವ ಒಂದು ಸಮಾಜವಾಗಿದೆ. ತನ್ನ ಪಾರಂಪರಿಕ ಗುಳೇ ಸಂಸ್ಕೃತಿಯಂತೆ ಈ ಸಮಾಜ ಪ್ರತಿ ವರ್ಷ ಉದ್ಯೋಗ ಅರಸಿ ವಲಸೆಯನ್ನು ಅವಲಂಬಿಸಿತ್ತು. ಆದರೆ ಈ ವರ್ಷ ಸಂಭವಿಸಿದ ಕೊರೋನ ಪರಿಸ್ಥಿತಿಯಿಂದ ಗುಳೇ ಹೋದ ಸಂದರ್ಭದಲ್ಲಿ ಅವರ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಯಿತು. ಹಾಗಾಗಿ ಈ ಗುಳೇ ಸಂಸ್ಕೃತಿ ತಪ್ಪಿಸಲು ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ತಾಂಡಾ ರೋಜ್‌ಗಾರ್ ಯೋಜನೆಯ ಮೂಲಕ ಅವರು ವಾಸಿಸುವ ಗ್ರಾಮಗಳಲ್ಲಿ ಉದ್ಯೋಗ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವುದರೊಂದಿಗೆ ಮೂಲಭೂತ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಇವರ ಗ್ರಾಮಗಳಿಗೆ ವ್ಯವಸ್ಥಿತ ರಸ್ತೆ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ ಎಂದರು.

ಬಂಜಾರ ಭಾಷೆಯನ್ನು ಉಳಿಸಲು ಹಾಗೂ ಬಂಜಾರ ಭಾಷಾ ಸಂಸ್ಕೃತಿ ಅಭಿವೃದ್ಧಿ ಪಡಿಸಲು ಡಾ. ಹಂ.ಪ ನಾಗರಾಜಯ್ಯ ನೇತೃತ್ವದ ತಜ್ಞರ ಸಮಿತಿ ವರದಿಯಂತೆ 'ಬಂಜಾರ ಭಾಷಾ ಅಕಾಡೆಮಿ' ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ಹಾಗೂ ಅಕಾಡೆಮಿ ಸ್ಥಾಪನೆಗೆ ಆದೇಶಿಸಲಾಗಿದೆ. ಹುಮ್ನಾಬಾದ್ ಬಳಿಯ ಲಾಲ್‌ಗರಿಯಲ್ಲಿ 34 ಎಕರೆ ಪ್ರದೇಶದಲ್ಲಿ ಸಿದ್ಧ ಉಡುಪು ಘಟಕ, ಕೊಪ್ಪಳದ ಬಹದ್ದೂರು ಬಂಡಿ ಅಭಿವೃದ್ಧಿಗೆ 50 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಸೂರಗೊಂಡನಕೊಪ್ಪದ ಸಂತ ಸೇವಾಲಾಲ್ ಪ್ರತಿಷ್ಠಾನದ ಅಭಿವೃದ್ಧಿಗೆ 10 ಕೋಟಿ, ಚಿನ್ನಿಕಟ್ಟೆಯಿಂದ ಸೂರಗೊಂಡನಕೊಪ್ಪ ರಸ್ತೆ ಅಭಿವೃದ್ಧಿಗೆ 10 ಕೋಟಿ ರೂ. ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಪಶು ಸಂಗೋಪನಾ ಸಚಿವ ಪ್ರಭು ಚೌವ್ಹಾಣ್ ಮಾತನಾಡಿ, ಪ್ರತಿ ತಾಂಡಾಗಳಲ್ಲಿ ಸರ್ಕಾರಿ ನ್ಯಾಯಬೆಲೆ ಅಂಗಡಿಗಳನ್ನು ಸರ್ಕಾರ ತೆರೆಯಬೇಕು ಹಾಗು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹೆಚ್ಚು ಅನುದಾನ ಒದಗಿಸಬೇಕೆಂದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ಹೊನ್ನಾಳಿ ಶಾಸಕ ಎಂ.ಪಿ ರೇಣುಕಾಚಾರ್ಯ ಮಾತನಾಡಿ, ಈ ಕ್ಷೇತ್ರದ ಅಭಿವೃದ್ಧಿಗೆ ಯಡಿಯೂರಪ್ಪನವರ ಕೊಡುಗೆ ಅಪಾರವಾಗಿದ್ದು ಈ ಭಾಗದ ಕೆರೆಗಳನ್ನು ತುಂಬಿಸಲು 435 ಕೋಟಿ ಬಿಡುಗಡೆ ಮಾಡಿದ್ದು, ಕ್ಷೇತ್ರದಲ್ಲಿ ತುಂಗಭದ್ರಾ ನದಿಯಿಂದ ಕುಡಿಯುವ ನೀರಿಗಾಗಿ 72 ಕೋಟಿ ಅನುದಾನ ಬಿಡುಗಡೆಯಾಗಲಿದೆ. ಭಕ್ತರು ಹಾಗೂ ಪ್ರಯಾಣಿಕರ ಅನುಕೂಲಕ್ಕಾಗಿ ಭಾಯಗಢ್ ರೈಲ್ವೆ ಯೋಜನೆ ಸರ್ವೇ ಆಗಿದ್ದು, ರೂ. 46 ಕೋಟಿಗೆ ಡಿಪಿಆರ್ ಆಗಿದೆ. ಹಾಗೂ ತಾಂಡಾ ಅಭಿವೃದ್ಧಿ ನಿಗಮದಿಂದ ಈ (2ನೇ ಪುಟಕ್ಕೆ)

### ರೈಲ್ವೇ ನಿಲ್ದಾಣಕ್ಕೆ ಭಾಯಾಗಢ್ ಹೆಸರಿಡಲು ಪತ್ರ

**ಶೀಘ್ರದಲ್ಲೇ ಸೂರಗೊಂಡನಕೊಪ್ಪ ಸಮೀಪ ರೈಲ್ವೆ ಸಂಪರ್ಕ ದೊರೆಯಲಿದ್ದು, ಈ ರೈಲ್ವೆ ನಿಲ್ದಾಣಕ್ಕೆ ಭಾಯಾಗಢ್ ನಿಲ್ದಾಣ ಎಂಬ ಹೆಸರಿಡಲು ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗುವುದು. ಈ ಕ್ಷೇತ್ರಕ್ಕೆ ಆಗಮಿಸುವ ಮಹಾರಾಷ್ಟ್ರ ಸೇರಿದಂತೆ ವಿವಿಧ ಪ್ರದೇಶಗಳಿಂದ ಆಗಮಿಸುವ ಭಕ್ತರಿಗೆ ಹಾಗೂ ಈ ಭಾಗದ ಜನರಿಗೆ ಅನುಕೂಲ ಆಗಲಿದೆ, ಸಂತ ಸೇವಾಲಾಲರ ಈ ಪುಣ್ಯ ಕ್ಷೇತ್ರ ಒಂದು ಧಾರ್ಮಿಕ ಕ್ಷೇತ್ರವಾಗಿಯಷ್ಟೇ ಉಳಿಯದೇ ಬಂಜಾರ ಸಮುದಾಯದ ಆಚಾರ-ವಿಚಾರ, ಕಲೆ, ಸಾಹಿತ್ಯ, ಸಂಸ್ಕೃತಿ ಉಳಿಸಲು ಒಂದು ಪ್ರಮುಖ ಪ್ರವಾಸಿ ತಾಣವಾಗಿ ಅಭಿವೃದ್ದಿ ಕೇಂದ್ರವಾಗಬೇಕಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಆಶಿಸಿದರು. ಸಂತ ಸೇವಾಲಾಲರ ಈ ಕ್ಷೇತ್ರ ಒಂದು ಪ್ರವಾಸಿ ತಾಣವಾಗಿ ಆಗುವ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ, ತಾಂಡಾ ಅಭಿವೃದ್ಧಿ ನಿಗಮದ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಸಮಗ್ರವಾಗಿ ಅಭಿವೃದ್ಧಿ ಪಡಿಸಲು ನೆರವು ನೀಡಲಾಗುವುದು ಎಂದು ಹೇಳಿದರು.**

> **ಬಂಜಾರ ಸಮುದಾಯ ಕಸೂತಿ ಕಲೆಯಲ್ಲಿ ವಿಶಿಷ್ಟ ಪರಿಣಿತಿ ಹೊಂದಿದ್ದು ಬಂಜಾರ ಸಿದ್ಧ ಉಡುಪು ಘಟಕಗಳ ಸ್ಥಾಪನೆಗೆ ಪ್ರತಿ ಜಿಲ್ಲೆಗೆ 5 ಕೋಟಿ ರೂ. ವೆಚ್ಚದಲ್ಲಿ ಉದ್ಯಮ ಸ್ಥಾಪನೆಗೆ ಅನುವು ಮಾಡಿಕೊಟ್ಟರೆ ಈ ಸಮಾಜ ಗುಳೇಯಿಂದ ಹೊರಗುಳಿದು ಒಂದೆಡೆ ನೆಲೆ ನಿಲ್ಲಲಿದೆ.**
>
> **- ಪ್ರಭು ಚೌವ್ಹಾಣ್, ಪಶು ಸಂಗೋಪನಾ ಸಚಿವ**

## ಅಸ್ಸಾಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಿಎಎ ಜಾರಿ ಇಲ್ಲ : ರಾಹುಲ್

ಶಿವಸಾಗರ (ಅಸ್ಸಾಂ), ಫೆ. 14 – ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು ಅಸ್ಸಾಂ ಒಡೆಯು ತ್ತಿವೆ ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ತಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಸಿ.ಎ.ಎ. ಕಾಯ್ದೆ ಜಾರಿಗೆ ತರುವುದಿಲ್ಲ ಎಂದಿದ್ದಾರೆ.

ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು, ರಾಜ್ಯಕ್ಕೆ ಜನರ ದನಿ ಆಲಿಸುವ ತನ್ನದೇ ಆದ ಮುಖ್ಯಮಂತ್ರಿ ಬೇಕಿದೆಯೇ ಹೊರತು ನಾಗಪುರ ಹಾಗೂ ದೆಹಲಿಯ ಮಾತು ಆಲಿಸುವವರಲ್ಲ ಎಂದಿದ್ದಾರೆ.

ಅಸ್ಸಾಂ ಒಪ್ಪಂದದಿಂದ ರಾಜ್ಯಕ್ಕೆ ಶಾಂತಿ ಹಾಗೂ ರಕ್ಷಣೆ ದೊರೆತಿದೆ. ನಾನು ಹಾಗೂ ನನ್ನ ಪಕ್ಷ ಈ ಒಪ್ಪಂದದ ಪ್ರತಿಯೊಂದು ಸಿದ್ಧಾಂತ ರಕ್ಷಿಸಲು ಕಾರ್ಯ ನಿರ್ವಹಿಸುತ್ತೇವೆ. ಒಂದು ಅಂಶದಿಂದಲೂ ದೂರ ಸರಿಯುವುದಿಲ್ಲ ಎಂದು ಗಾಂಧಿ ಹೇಳಿದ್ದಾರೆ.

ಅಕ್ರಮ ವಲಸಿಗರ ಸಮಸ್ಯೆಯನ್ನು ಅಸ್ಸಾಂ ಎದುರಿಸುತ್ತಿದೆ ಎದಿರುವ ಅವರು, ರಾಜ್ಯದ ಜನರು ಮಾತುಕತೆಯ ಮೂಲಕ ಈ ಸಮಸ್ಯೆ ಬಗೆಹರಿಸಿಕೊಳ್ಳಲು ಸಮರ್ಥರಿದ್ದಾರೆ ಎಂದಿದ್ದಾರೆ.

ಅಸ್ಸಾಂ ಒಪ್ಪಂದಕ್ಕೆ ಸಂಬಂಧಿಸಿದಂತೆ ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು (4ನೇ ಪುಟಕ್ಕೆ)

## ದೇಶೀಯ ಸಮರ ಟ್ಯಾಂಕ್ ಅರ್ಜುನ್ ಸೈನ್ಯಕ್ಕೆ ಸೇರ್ಪಡೆ

ಚೆನ್ನೈ, ಫೆ. 14- ದೇಶೀಯವಾಗಿ ನಿರ್ಮಿಸಲಾಗಿರುವ ಅರ್ಜುನ್ ಸಮರ ಟ್ಯಾಂಕ್ (ಎಂ.ಎಕೆ. -1ಎ) ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ಸೈನ್ಯಕ್ಕೆ ಹಸ್ತಾಂತರಿಸಿದ್ದಾರೆ.

ಡಿ.ಆರ್.ಡಿ.ಒ. ಅತ್ಯಾಧುನಿಕ ಸಮರ ಟ್ಯಾಂಕ್ ಅನ್ನು ರೂಪಿಸಿ ಉತ್ಪಾದಿಸಿದೆ. ಈ ನಿರ್ಮಾಣದಲ್ಲಿ 15 ಶೈಕ್ಷಣಿಕ ಸಂಸ್ಥೆಗಳು, ಎಂಟು ಪ್ರಯೋಗಾಲಯಗಳು ಹಾಗೂ ಹಲವು ಸಣ್ಣ ಉದ್ಯಮಗಳು ಭಾಗಿಯಾಗಿವೆ.

## ಜೀವನಾಂಶದಲ್ಲಿ ಸಮಾನತೆಗೆ ಮುಸ್ಲಿಮ್ ಮಂಡಳಿ ವಿರೋಧ

**ಅಂತರರಾಷ್ಟ್ರೀಯ ನಡಾವಳಿ ಹಾಗೂ ಸಂವಿಧಾನದ ಅನ್ವಯ ಸಮಾನತೆ ತರಬೇಕೆಂಬ ಅರ್ಜಿಗೆ ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪ ದಾಖಲು**

ನವದೆಹಲಿ, ಫೆ. 14 – ಜೀವನಾಂಶದಲ್ಲಿ ಸಮಾನತೆ ತರುವುದನ್ನು ವಿರೋಧಿಸಿ ಅಖಿಲ ಭಾರತ ಮುಸ್ಲಿಮ್ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ. ಅಂತರರಾಷ್ಟ್ರೀಯ ನಡಾವಳಿಗಳು ಹಾಗೂ ಸಂವಿಧಾನದ ಅನ್ವಯ ಲಿಂಗ ಹಾಗೂ ಧರ್ಮಾತೀತವಾದ ಏಕರೂಪದ ಜೀವನಾಂಶ ಇರಬೇಕು ಎಂಬ ಅರ್ಜಿಯನ್ನು ಮಂಡಳಿ ವಿರೋಧಿಸಿದೆ.

ವಕೀಲ ಹಾಗೂ ಬಿಜೆಪಿ ನಾಯಕ ಅಶ್ವಿನಿ ಕುಮಾರ್ ಉಪಾಧ್ಯಾಯ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಿದ್ದು, ಜೀವನಾಂಶದಲ್ಲಿ ಇರುವ ಲೋಪಗಳನ್ನು ಸರಿಪಡಿಸಬೇಕು. ನಾಗರಿಕರ ನಡುವೆ ಈ ವಿಷಯದಲ್ಲಿ ಪಕ್ಷಪಾತ ಇರಬಾರದು ಎಂದು ಮನವಿ ಮಾಡಿಕೊಂಡಿದ್ದರು.

ಸಂವಿಧಾನದ 13ನೇ ವಿಧಿಯಲ್ಲಿ ಸಂಪ್ರದಾಯ ಹಾಗೂ ಪದ್ಧತಿಗಳನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಧಾರ್ಮಿಕ ನಂಬಿಕೆಯನ್ನು ವೈಯಕ್ತಿಕ ಕಾನೂನುಗಳ ಜೊತೆ ಸೇರಿಸಿಲ್ಲ. ಸಂವಿಧಾನ ರೂಪಕರಿಗೆ ವೈಯಕ್ತಿಕ ಹಾಗೂ ಸಂಪ್ರದಾಯಗಳ ನಡುವೆ ಇರುವ ವ್ಯತ್ಯಾಸ ತಿಳಿದಿತ್ತು. ಹೀಗಾಗಿ ವೈಯಕ್ತಿಕ ಕಾನೂನನ್ನು ಹೊರತಾಗಿಸಿ ಸಂಪ್ರದಾಯವನ್ನು ಸೇರಿಸಲಾಗಿದೆ ಎಂದು ಉಪಾಧ್ಯಾಯ್ ಅರ್ಜಿ ದಾಖಲಿಸಿದ್ದಾರೆ.

ಇದನ್ನು ವಿರೋಧಿಸಿರುವ (3ನೇ ಪುಟಕ್ಕೆ)

## ಕನಿಷ್ಠ ಬೆಂಬಲ ಬೆಲೆ ಕಾಯ್ದೆ ತನ್ನಿ



ಜಗಳೂರು, ಫೆ.14- ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೊಳಿಸಲಿ ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್) ಬಣದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಆಗ್ರಹಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ನಡೆಸಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೆಕ್ಕೆ ಜೋಳ ಕ್ವಿಂಟಾಲ್‌ಗೆ ರೂ. 1,750/- ಕನಿಷ್ಠ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವೇ ನಿಗದಿ ಪಡಿಸಿದರೂ ರೈತರಿಗೆ ಸಿಗುತ್ತಿಲ್ಲ. ಆದ್ದರಿಂದ ಕನಿಷ್ಠ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸು ವವರ ವಿರುದ್ಧ ಎರಡು ವರ್ಷ ದಂಡ ಸಹಿತ ಜೈಲು ಹಾಗೂ ಪರವಾನಿಗೆ ರದ್ದು ಪಡಿಸುವ ಕಾಯ್ದೆ ಜಾರಿಗೊಳಿಸಿದರೆ ರೈತರಿಗೆ ನ್ಯಾಯ ಸಿಗುತ್ತದೆ ಎಂದರು.

ಎಪಿಎಂಸಿ ಕಾಯ್ದೆ ರೈತಪರವಾಗಿದೆ ಎನ್ನುವ ಸರ್ಕಾರದ ಹೇಳಿಕೆಗೆ ಸ್ವಾಗತ. ಆದರೆ ಪ್ರಧಾನಿ ಮೋದಿ ಅವರಿಗೆ ನಮ್ಮ ಪ್ರಶ್ನೆ ಏನೆಂದರೆ ನೇರವಾಗಿ ರೈತರ ಮನೆ ಬಾಗಿಲಿಗೆ ಆಗಮಿಸಿ ಖರೀದಿಸುವ ವರು ವಾಲ್ಮಾ, ರಿಲೈಯನ್ಸ್, ಮೋರ್ ನಂತಹ ಬಹುರಾಷ್ಟ್ರೀಯ ಕಂಪನಿ ಮಾಲೀಕರಾಗಿದ್ದಾರೆ. ಇದರಿಂದ ರೈತರ ಉತ್ಪಾದಕ ವಸ್ತುಗಳಿಗೆ ಬೆಲೆ ನಿಗದಿಪಡಿಸಲು ಏಕೆ ಸಾಧ್ಯವಾಗುತ್ತಿಲ್ಲ. ಅಗತ್ಯ ವಸ್ತುಗಳ ಕಾಯ್ದೆಯಿಂದ ಆಹಾರ ದಾಸ್ತಾನು (4ನೇ ಪುಟಕ್ಕೆ)

## ಪ್ರತಿ ವೃತ್ತಿಯವರೂ 'ಯೋಗಿ'ಗಳಾದರೆ ಸುಖೀ ಸಮಾಜ ಸಾಧ್ಯ: ಡಾ. ಈಶ್ವರಪ್ಪ

### ಹೆಚ್.ಕೆ. ಲಿಂಗರಾಜು ಅವರ 'ಶಿಕ್ಷಣ ಯೋಗಿ' ಅಭಿನಂದನಾ ಗ್ರಂಥ ಲೋಕಾರ್ಪಣೆ



ದಾವಣಗೆರೆ, ಫೆ.14- ನೇಗಿಲ ಯೋಗಿ, ಶಿಕ್ಷಣ ಯೋಗಿ ಎಂಬ ಎರಡು ವೃತ್ತಿಗಳ ಜನರು ಯೋಗಿಗಳಾದಂತೆ ಪ್ರತಿ ವೃತ್ತಿಯಲ್ಲೂ ನಿರತರಾದವರು ಯೋಗಿಗಳಾದರೆ ಸುಖೀ ಸಮಾಜ ನಿರ್ಮಾಣ ಸಾಧ್ಯವಿದೆ ಎಂದು ಹಿರಿಯ ಸಾಹಿತಿ ಯೂ ಆದ ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಅಭಿಪ್ರಾಯಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಸೌಹಾರ್ದ ಪ್ರಕಾಶನದಿಂದ ಪ್ರಕಟಗೊಂಡ ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜು ಅವರ ಅಭಿನಂದನಾ ಗ್ರಂಥ 'ಶಿಕ್ಷಣ ಯೋಗಿ' ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, 'ನೇಗಿಲ ಯೋಗಿ', 'ಶಿಕ್ಷಣ ಯೋಗಿ'ಗಳು ಸಮಾಜಕ್ಕೆ ಮಾರ್ಗದರ್ಶಕರಾಗಿ, ಬೆಳಕಾಗಿ, ಉತ್ಕೃಷ್ಟ ಸಮಾಜ ನಿರ್ಮಿಸಬೇಕು ಎಂದು ಹೇಳಿದರು.

ಆತ್ಮಕಥನಗಳು, ಜೀವನ ಚರಿತ್ರೆಗಳು ಒಂದು ಬಗೆಯಾದರೆ, ನಮ್ಮ ಜೊತೆಗಿದ್ದು, ಸಮಾಜ ಮುಖಿಯಾಗಿ ಕಾರ್ಯ ಮಾಡಿದವರ ಬಗ್ಗೆ ಅಭಿಂದನಾ ಗ್ರಂಥ ಬರೆಯುವುದು ಮತ್ತೊಂದು ಬಗೆ. ಯಾವ ಕ್ಷೇತ್ರದಲ್ಲಿ ವ್ಯಕ್ತಿ ಕೆಲಸ ಮಾಡಿರುತ್ತಾರೋ ಆ ಕ್ಷೇತ್ರದಲ್ಲಿನ ಅವರ ಸಾಧನೆ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಭಿನಂದನಾ ಗ್ರಂಥ ಬರೆಯಲಾಗುತ್ತದೆ. ಇದೊಂದು ರೀತಿ ಆಕರ ಗ್ರಂಥಗಳಿದ್ದಂತೆ ಎಂದು ಬಣ್ಣಿಸಿದರು.

ಲಿಂಗರಾಜು ಅವರ ಬಗ್ಗೆ ಅಪಾರ ಗೌರವ ಇರುವುದಾಗಿ ಹೇಳಿದ ಈಶ್ವರಪ್ಪ ಅವರು, ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸಿದ ಲಿಂಗರಾಜು, ನಂತರ ವಿಧಾನಸೌಧದಲ್ಲಿ ಸಚಿವರುಗಳ ಸಲಹೆಗಾರರಾಗಿ, ವಿಶೇಷ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ವಿಧಾನಸೌಧದಲ್ಲಿ ಕರ್ತವ್ಯ ನಿರ್ವಹಿಸಿ ಮರಳಿ ಬಂದ ಏಕೈಕ ವ್ಯಕ್ತಿ ಎಂದು ಪ್ರಶಂಸಿಸಿದರು.

ಯಾರು ಶಿಕ್ಷಕ ವೃತ್ತಿಯನ್ನು ಪ್ರೀತಿಸುವರೋ ಅವರು ವಿಧಾನಸೌಧ ಅಥವಾ ಪಾರ್ಲಿಮೆಂಟ್ ಗೆ ಹೋದರೂ ವಾಪಸ್ ಬರುತ್ತಾರೆ. ಏಕೆಂದರೆ ಶಾಲಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳ ಮುಖದಲ್ಲಿನ ನಗು ನೀಡುವ ಸಂತೋಷ ಶಿಕ್ಷಕರಾದವರಿಗೆ ಮತ್ತೆಲ್ಲೂ ಸಿಗುವುದಿಲ್ಲ ಎಂದರು.

ಲಿಂಗರಾಜು ಅವರು ಡಯಟ್ ಪ್ರಾಚಾರ್ಯರಾದ ಮೇಲೆ ಅಲ್ಲಿನ ಅಂತರಂಗ ಹಾಗೂ ಬಹಿರಂಗದ ಸ್ವರೂಪಗಳೂ ಬದಲಾಗಿದೆ. ಅಂತರಂಗದ ಸ್ವರೂಪ ಬದಲಾದಾಗ ನಮ್ಮ ವೃತ್ತಿಗೆ ಗೌರವ ಬರುತ್ತದೆ. ಅಂತಹ ಘನತೆ, ಗೌರವ ಕೊಟ್ಟ ಲಿಂಗರಾಜು ಗೌರವಕ್ಕೆ ಅರ್ಹರು. ಅವರ ಕೆಲಸಗಳು ಶಾಶ್ವತವಾಗಿ ಉಳಿಯುವಂತೆ ಹಿರಿಯ ಸಾಹಿತಿಯೂ ಆಗಿರುವ ಶಿಕ್ಷಕಿ ಶ್ರೀಮತಿ ಶಶಿಕಲಾ (2ನೇ ಪುಟಕ್ಕೆ)

## ಅಡಿಕೆಯಲ್ಲಿ ಕಾಂಡ ಸೀಳುವಿಕೆ ತಡೆಯಲು ಸಂರಕ್ಷಣಾ ಕ್ರಮ


ದಾವಣಗೆರೆ, ಫೆ.14- ಅಡಿಕೆ ಮರಗಳಲ್ಲಿ ಬಿಸಿಲಿನಿಂದ ಕಾಂಡ ಸೀಳುವ ಸಂಭವವಿದ್ದು, ರೈತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ತೋಟಗಾರಿಕೆ ಇಲಾಖೆ ಸಲಹೆಗಳನ್ನು ನೀಡಿದೆ.

ಸೂರ್ಯನ ಕಿರಣಗಳು ನೈರುತ್ಯ ದಿಕ್ಕಿನಿಂದ ನೇರವಾಗಿ ಅಡಿಕೆ ಮರಗಳ ಮೇಲೆ ಬೀಳುವುದರಿಂದ ಕಾಂಡಗಳು ಸುಟ್ಟಂತಾಗಿ ಸೀಳುತ್ತವೆ. ಕಾಂಡದ ಎಳೆಯ ಭಾಗ ಬಂಗಾರದ ಹಳದಿ ಬಣ್ಣಕ್ಕೆ ಮಾರ್ಪಟ್ಟು ನಂತರದಲ್ಲಿ ಬಿರುಕುಗಳು ಕಾಣಿಸಿಕೊಂಡು ಕಾಂಡಗಳು ಬಲಹೀನವಾಗುತ್ತವೆ. ಇಂತಹ ಬಿರುಕುಗಳ ಮೂಲಕ ರೋಗಾಣುಗಳು ಒಳಗೆ ಸೇರಿಕೊಂಡು ರೋಗ ತಗುಲುವ ಸಾಧ್ಯತೆ ಹೆಚ್ಚಾಗಿದ್ದು ಬಲವಾದ ಗಾಳಿ ಬೀಸಿದಾಗ ಮರಗಳು ಮುರಿದು ಬೀಳುತ್ತವೆ.

ಸೂರ್ಯನ ಬೇಗೆಯಿಂದ ಮರದ ಕಾಂಡಗಳು ಸೀಳುವುದನ್ನು ತಪ್ಪಿಸಲು ತೋಟದ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನಲ್ಲಿ ಎತ್ತರಕ್ಕೆ ಬೆಳೆಯುವ ನೆರಳು ಸಸ್ಯಗಳನ್ನು ಬೆಳೆಸಬೇಕು. ಸಸಿಗಳನ್ನು ನೆಡುವಾಗ ಸರಿಯಾದ ದಿಕ್ಕಿನಲ್ಲಿ ನಾಟಿ ಮಾಡಿ ನೆರಳನ್ನು ಒದಗಿಸಬೇಕು ಹಾಗೂ 10 ಕೆ.ಜಿ. ಸುಣ್ಣ, 2 ಕೆ.ಜಿ ಬೆಲ್ಲ ಮತ್ತು ಅರ್ಧ ಕೆ.ಜಿ ಮೈದಾ ಹಿಟ್ಟನ್ನು ನೀರಿನಲ್ಲಿ ಬೆರೆಸಿ ಮಿಶ್ರಣವನ್ನು ಕಾಂಡಗಳಿಗೆ ಬಳಿಯುವುದರಿಂದ ಮರಗಳನ್ನು ಸೂರ್ಯನ ಅತಿಯಾದ ತಾಪದಿಂದ ರಕ್ಷಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ತೋಟಗಾರಿಕೆ ಅಧಿಕಾರಿಯವರನ್ನು ಅಥವಾ ವಿಷಯ ತಜ್ಞರು, ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರ, ದಾವಣಗೆರೆ ಇವರನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

## ಹರಪನಹಳ್ಳಿ : ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ರಿಯಾಜ್



ಹರಪನಹಳ್ಳಿ, ಫೆ.14 - ಬಳ್ಳಾರಿ ಗ್ರಾಮಾಂತರ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಪಟ್ಟಣದ ಕೆ.ರಿಯಾಜ್ ಆಯ್ಕೆಯಾಗಿದ್ದಾರೆ. ಬಳ್ಳಾರಿ ಗ್ರಾಮಾಂತರ ಜಿಲ್ಲಾ ಯುವ ಕಾಂಗ್ರೆಸ್ ಚುನಾವಣೆಯಲ್ಲಿ 3ನೇ ಸ್ಥಾನಕ್ಕೆ 384 ಮತಗಳನ್ನು ಪಡೆಯುವ ಮೂಲಕ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

# ತಾಂಡಾಗಳ ಅಭಿವೃದ್ಧಿಗೆ ಕ್ರಮ




ನ್ಯಾಮತಿ ತಾಲ್ಲೂಕಿನ ಸೂರಗೊಂಡನ ಕೊಪ್ಪ ಭಾಯಾಗಢ್ ನ ಶ್ರೀ ಸಂತ ಸೇವಾಲಾಲ್ ಕ್ಷೇತ್ರದಲ್ಲಿ ನಡೆದ ಸಂತ ಸೇವಾಲಾಲ್ ಅವರ 282ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಮಾತನಾಡಿದರು.

(1ನೇ ಪುಟದಿಂದ) ಪುಣ್ಯ ಕ್ಷೇತ್ರ ಒಂದು ರೀತಿ ಎರಡನೇ ಧರ್ಮಸ್ಥಳದಂತೆ ಅಭಿವೃದ್ಧಿ ಹೊಂದುತ್ತಿದೆ ಎಂದರು.

ರಾಜ್ಯ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಕುಡಚಿ ಶಾಸಕ ಪಿ. ರಾಜೀವ್ ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತ ದೇಶದ ಸಂಸ್ಕೃತಿಗೆ ಬಂಜಾರ ಸಮುದಾಯದ ಕೊಡುಗೆ ಬಹಳ ದೊಡ್ಡದಿದೆ. ವಿಶಿಷ್ಟ ಸಂಸ್ಕೃತಿ ಹೊಂದಿರುವ ಜನಾಂಗದ ಪರಂಪರೆಯನ್ನು ಉಳಿಸಲು ಸರ್ಕಾರ ಸಾಕಷ್ಟು ಶ್ರಮಿಸುತ್ತಿದೆ. ಈ ಸಮುದಾಯದವರು ವಾಸಿಸುವ 3,300 ತಾಂಡಾಗಳಲ್ಲಿ 1,700 ತಾಂಡಾಗಳು ಕಂದಾಯ ಗ್ರಾಮಗಳಾಗುವುದು ಬಾಕಿ ಇದೆ. ಮುಖ್ಯಮಂತ್ರಿಗಳು ಇನ್ನೊಂದು ವರ್ಷದೊಳಗಾಗಿ ಎಲ್ಲಾ ತಾಂಡಾಗಳನ್ನು ಸರ್ವೇ ಮಾಡಲು ಭೂಮಾಪನ ಇಲಾಖೆ ಕಮೀಷನರ್‌ಗಳಿಗೆ ಸೂಚಿಸಿದ್ದಾರೆ. ಹಾಗೂ ಈ ಸಮಾಜದವರು ಗುಳೇ ಹೋದಾಗ ಅವರ ಮಕ್ಕಳಿಗೆ ಶಿಕ್ಷಣಕ್ಕೆ ತೊಂದರೆಯಾಗದಂತೆ ಋತುಮಾನದ ಮಾದರಿಯ ಶಾಲೆಗಳನ್ನು ಆರಂಭಿಸಬೇಕೆಂದರು. ಸಮಾಜದ ವಿಶಿಷ್ಟ ಬಂಜಾರ ಉಡುಗೆ ಆಧುನಿಕ ಸ್ಪರ್ಶದೊಂದಿಗೆ ವಿದೇಶಗಳಲ್ಲೂ ಬೇಡಿಕೆ ಪಡೆದುಕೊಂಡಿದೆ. ಈ ಉಡುಗೆ ಉದ್ಯಮಕ್ಕೆ ಹೆಚ್ಚು ಒತ್ತು ನೀಡಬೇಕೆಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಬಂಜಾರ ಮಾದರಿಯ ಆಧುನಿಕ ಶೈಲಿಯ ವಿವಿಧ ಉಡುಪುಗಳನ್ನು ಮುಖ್ಯಮಂತ್ರಿ ಲೋಕಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ, ತೋಟಗಾರಿಕೆ ಸಚಿವ ಆರ್. ಶಂಕರ್, ಸಂಸದರುಗಳಾದ ಜಿ.ಎಂ.ಸಿದ್ದೇಶ್ವರ, ಬಿ.ವೈ.ರಾಘವೇಂದ್ರ, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ, ಶಿವಮೊಗ್ಗ ಗ್ರಾಮೀಣ ಶಾಸಕ ಅಶೋಕ್ ನಾಯಕ, ಪ್ರತಿಷ್ಠಾನದ ಅಧ್ಯಕ್ಷ ರುದ್ರಪ್ಪ ಲಮಾಣಿ, ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಗುರುಮೂರ್ತಿ, ಜಿ.ಪಂ. ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯ್ಕ, ಜಿ.ಪಂ. ಸದಸ್ಯರಾದ ಉಮಾ ರಮೇಶ್, ಸುರೇಂದ್ರನಾಯಕ, ಜಿಲ್ಲಾಧಿ ಕಾರಿ ಮಹಾಂತೇಶ ಬೀಳಗಿ, ಜಿ.ಪಂ ಸಿಇಒ ಪದ್ಮ ಬಸವಂತಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಹಾಗೂ ಇತರರು ಉಪಸ್ಥಿತರಿದ್ದರು.

## ಮೈಲಾರ ಜಾತ್ರೆಗೆ 'ಕೊರೊನಾ' ಕರಿನೆರಳು

### ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ

ಹೂವಿನಹಡಗಲಿ, ಫೆ.14- ಸುಪ್ರಸಿದ್ಧ ತಾಲ್ಲೂಕಿನ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವನ್ನು ಕೋವಿಡ್-19 ರ ಮಾರ್ಗಸೂಚಿ ಅನ್ವಯ ಸರಳ ರೀತಿಯಲ್ಲಿ ಆಚರಿಸಲು ಜಿಲ್ಲಾಡಳಿತ ಆದೇಶಿಸಿದೆ.

ಈ ಬಾರಿ ಮೈಲಾರ ಜಾತ್ರೆಗೆ 'ಕೊರೊನಾ' ಕರಿ ನೆರಳು ಬಿದ್ದಿದ್ದು ಪರಸ್ಥಳದ ಭಕ್ತರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ.

ಈ ಬಗ್ಗೆ ಮೈಲಾರದಲ್ಲಿ ಜಿಲ್ಲಾಡಳಿತ ನಡೆಸಿದ ಜಾತ್ರೆಯ ಪೂರ್ವಸಿದ್ಧತಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಪವನ್‌ಕುಮಾರ್ ಅವರು, ಕೋವಿಡ್ ಸೋಂಕಿತರ ಸಂಖ್ಯೆ ಇಳಿಮುಖ ಕಂಡಿದ್ದರೂ ಸಹ ಶೇ.75 ರಷ್ಟು ಲಸಿಕೆ ತಲುಪುವವರಿಗೆ ಕೋವಿಡ್ ಮಾರ್ಗಸೂಚಿ ಪಾಲನೆ ಅನಿವಾರ್ಯ ಎಂದರು.

ಜಾತ್ರೆ ಮತ್ತು ಕಾರಣಿಕ ಆಲಿಸಲು ಲಕ್ಷಾಂತರ ಭಕ್ತರು ಸೇರುವ, ಆಗಮಿಸುವ ಸಾಧ್ಯತೆ ಇರುವುದರಿಂದ ಸಾಂಕ್ರಾಮಿಕ ರೋಗ ವ್ಯಾಪಿಸಲು ಸಾಧ್ಯತೆ ಇರುತ್ತದೆ. ಜನಾರೋಗ್ಯದ ದೃಷ್ಟಿಯಿಂದ ಈ ಬಾರಿಯ ಸರಳ ಆಚರಣೆಗೆ ಸಹಕರಿಸುವಂತೆ ಭಕ್ತರಲ್ಲಿ ವಿನಂತಿಸಿಕೊಂಡರು.

ಜಾತ್ರೆಯಲ್ಲಿ ನಾಟಕ, ಮನರಂಜನೆಯ ಆಟಗಳು, ಅಂಗಡಿ ಮುಂಗಟ್ಟುಗಳನ್ನು ತೆರೆಯುವುದಕ್ಕೆ ಅನುಮತಿ ನೀಡಲು ಆಗುವುದಿಲ್ಲ ಎಂದು ತಿಳಿಸಿದರು. ಮಾಧ್ಯಮದ ಮೂಲಕ ವೀಕ್ಷಣೆ ಮಾಡಲು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಅವರು, ಮೈಲಾರ ಕಾರಣಿಕಕ್ಕೆ ಶತಮಾನದ ಇತಿಹಾಸವಿದೆ. ಜನಪ್ರತಿನಿಧಿಗಳು ಹಾಗೂ ಸ್ಥಳೀಯರ ಅಭಿಪ್ರಾಯ ಪಡೆಯದೇ ಜಾತ್ರೆಗೆ ನಿರ್ಬಂಧ ಹೇರುವುದು ಸರಿಯಲ್ಲ ಎಂದು ಹೇಳಿದರು.

ಶ್ರೀ ಗುರು ವೆಂಕಪ್ಪಯ್ಯ ಒಡೆಯರ್, ಜಿ.ಪಂ. ಸಿಇಒ ನಂದಿನಿ, ಎಸ್ಪಿ ಸೈದುಲ್ಲಾ ಅದಾಲತ್ ಮುಜರಾಯಿ ಇಲಾಖೆ ಸಹಾಯಕ ಆಯುಕ್ತ ಎಂ.ಹೆಚ್. ಪ್ರಕಾಶ್‌ರಾವ್ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

## ಡಿಯರ್ ಲೈಫ್ ಎಂಪವರ್ ವತಿಯಿಂದ ಆರೈಕೆ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ



ದಾವಣಗೆರೆ, ಫೆ.14- ಪುಲ್ವಾಮಾ ಹತ್ಯಾಕಾಂಡದ ಎರಡನೇ ವರ್ಷದ ಕರಾಳ ನೆನಪಿನಲ್ಲಿ ಮತ್ತು ಧಾರವಾಡ ಸಮೀಪದ ಇಟ್ಟಿಗಟ್ಟಿ ಬಳಿ ಈಚೆಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮಡಿದ ನಗರದ ಮಾತೆಯರ ನೆನಪಿನಲ್ಲಿ ಡಿಯರ್ ಲೈಫ್ ಎಂಪವರ್ ಇಂಡಿಯಾ ಮತ್ತು ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ಇವರ ಜಂಟಿ ಆಶ್ರಯದಲ್ಲಿ ನಗರದ ಆರೈಕೆ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಟಿ.ಗುರುಸಿದ್ದನಗೌಡ, ಆರೈಕೆ ಆಸ್ಪತ್ರೆಯ ಡಾ. ಹಾಲಸ್ವಾಮಿ ಕಂಬಾಳಿಮಠ, ಡಾ. ದೀಪಶ್ರೀ, ಡಿಯರ್ ಲೈಫ್‌ನ ವಿವೇಕ್, ಸುನೀಲ್, ರೋಟರಿ ದಾವಣಗೆರೆ ದಕ್ಷಿಣ ವಿಭಾಗದ ಅಧ್ಯಕ್ಷ ಬಸವರಾಜ್ ಹಾಗೂ ಲೈಫ್‌ಲೈನ್ ಬ್ಲಡ್ ಬ್ಯಾಂಕಿನ ಪ್ರಶಾಂತ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

## ಚಳ್ಳಕೆರೆಯಲ್ಲಿ ಸಂಚಾರಿ ನಿಯಮ ಪಾಲಿಸದ ಸವಾರರಿಗೆ ದಂಡ



ಚಳ್ಳಕೆರೆ, ಫೆ.14- ಸಂಚಾರಿ ನಿಯಮವನ್ನು ಪಾಲಿಸದ ಸವಾರರಿಗೆ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಮಂಜುನಾಥ ಅರ್ಜುನ್ ಲಿಂಗಾರೆಡ್ಡಿ ದಂಡ ಹಾಕುವುದರ ಮೂಲಕ ಎಚ್ಚರಿಕೆ ನೀಡಿದರು. ಈ ಸಮಯದಲ್ಲಿ ಪಿಎಸ್‌ಐಗಳಾದ ಓಬಣ್ಣ, ಶಂಕರಮೂರ್ತಿ, ಪರಶುರಾಮ್, ರಾಜು ಇದ್ದರು.

## ಶಿಲೆ ದೇವರಾಗಲು ಶರಣರ ಸ್ಪರ್ಶ ಅವಶ್ಯ

### ಸಿದ್ಧಾರೂಢ ಮಠದಲ್ಲಿ ವೇದಾಂತ ಪರಿಷತ್



ರಾಣೇಬೆನ್ನೂರು, ಫೆ.14- ವೇಷಧಾರಿ ಜಂಗಮನನ್ನು ವೇಶ್ಯೆಯರು, ಭೂಷಣಧಾರಿ ಜಂಗಮನನ್ನು ಭೂಪಾಲನು ಪೂಜಿಸುತ್ತಾನೆ. ಜ್ಞಾನವಂತ ಜಂಗಮನನ್ನು ಅರಿತವರು ಪೂಜಿಸುತ್ತಾರೆ ಎಂದು ಬಳ್ಳೂರ ಶ್ರೀ ವಿದ್ಯಾನಂದ ಭಾರತಿ ಮಹಾಸ್ವಾಮೀಜಿ ಹೇಳಿದರು.

ಅವರು ಸ್ಥಳೀಯ ಸಿದ್ಧಾರೂಢ ಮಠದಲ್ಲಿ ನಡೆಯುತ್ತಿರುವ 21 ವೇದಾಂತ ಪರಿಷತ್‌ನಲ್ಲಿ 'ಶರಣ ಜನರ ಸದುಹೃದಯನಳಿನದೊಳು ಪರಿಶೋಭಿಸುತಿಹುದು ನಿನ್ನ ಪಾದ' ವಿಷಯ ಕುರಿತು ಸಂದೇಶ ನೀಡುತ್ತಿದ್ದರು.

ವೇಶಭೂಷಣದಿಂದ ಶರಣರಾಗುವದಿಲ್ಲ. ನಿರ್ಮಲ ಹಾಗೂ ಅಭೇದ ಹೃದಯವಂತರು ಶರಣರಾಗುತ್ತಾರೆ. ಶಿಲೆ ದೇವರಾಗಲು ಶರಣರ, ಗುರುಗಳ ಸ್ಪರ್ಶ ಅವಶ್ಯ. ಅದರಂತೆ ಅವರ ದರ್ಶನ ಹಾಗೂ ಸ್ಪರ್ಶದಿಂದಲೇ ಶಿವನನ್ನು ಕಾಣಲು ಸಾಧ್ಯವೆಂದು ಶ್ರೀಗಳು ನುಡಿದರು.

ಧರ್ಮಕಾರ್ಯಗಳಲ್ಲಿ ಭಾಗವಹಿಸುವ ಭಕ್ತರು ಏಕಾಗ್ರತೆ ಹೊಂದಿದವರಿರಬೇಕು. ಶೂನ್ಯಾಗ್ರ ಹಾಗೂ ಅನೇಕಾಗ್ರ ಹೊಂದಿದವರಿರಬಾರದು. ಧರ್ಮ ಅಹಂಕಾರದಿಂದ ಕೂಡಿರಬಾರದು ಎಂದು ಜಡೇಸಿದ್ದೇಶ್ವರ ಮಠದ ಶ್ರೀ ರಾಮಾನಂದ ಸ್ವಾಮೀಜಿ ಹೇಳಿದರು. ಸಂಜೆ 'ಸುಮ್ಮನೆ ಕಾಲವನು ಕಳೆದು ಸಾವುದು ಚಿತವೆ' ವಿಷಯ ಕುರಿತು ಎಲ್ಲ ಶ್ರೀಗಳು ಉಪದೇಶ ನೀಡಿದರು.

ಬುದ್ದಿ ಪ್ರಭಾನಂದ ಶ್ರೀಗಳು, ಸಚ್ಚಿದಾನಂದ ಸ್ವಾಮೀಜಿ, ತೆಲಗಿ ಪೂರ್ಣಾನಂದ ಶ್ರೀಗಳು ಹಾಗೂ ಲಿಂಗಯ್ಯ ಸ್ವಾಮೀಜಿ ಪಾಲ್ಗೊಂಡಿದ್ದರು. ಪೀಠಾಧಿಪತಿ ಮಲ್ಲಯ್ಯಜ್ಜ ಅವರು ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದ ಸಂಚಾಲಕ ಪವನ ಮಲ್ಲಾಡದ ಸ್ವಾಗತಿಸಿ, ನಿರೂಪಿಸಿದರು.

## ಹರಪನಹಳ್ಳಿಯಲ್ಲಿ ನಾಡಿದ್ದು ಬಯಲು ಕುಸ್ತಿ ಪಂದ್ಯ



ಹರಪನಹಳ್ಳಿ, ಫೆ.14 - ಹಗರಿ ಬೊಮ್ಮನಹಳ್ಳಿ ಪಟ್ಟಣದ ಆರಾಧ್ಯ ದೇವ ಶ್ರೀ ವೆಂಕಟೇಶ್ವರ ಸ್ವಾಮಿ ರಥೋತ್ಸವದ ನಿಮಿತ್ತ ಇದೇ ದಿನಾಂಕ 17 ರಂದು ಬಯಲು ಕುಸ್ತಿ ಪಂದ್ಯಾಟವನ್ನು ಹಮ್ಮಿಕೊಳ್ಳಲಾಗಿದೆ.

ಇಲ್ಲಿನ ರಾಮನಗರದ ಗಂಬಿ ಸರಕಾರಿ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ನಾಣಿಕೇರಿ ದೈವಸ್ಥರು ಕುಸ್ತಿ ಪಂದ್ಯಾಟವನ್ನು ಆಯೋಜಿಸಿದ್ದಾರೆ.

ಅಂದು ಮಧ್ಯಾಹ್ನ 3 ಗಂಟೆಯಿಂದ ಕುಸ್ತಿಗಳು ಆರಂಭವಾಗುತ್ತವೆ ಅಖಾಡದಲ್ಲಿಯೇ ಜೊತೆ ಮಾಡಲಾಗವುದು. ಗೆದ್ದ ಪೈಲ್ವಾನರಿಗೆ ನಗದು ಬಹುಮಾನ ಕೊಟ್ಟು ಪುರಸ್ಕರಿಸಲಾಗುತ್ತದೆ. ದೊಡ್ಡ ಜೊತೆ ಪೈಕಿ ಹಾಗೂ ಪರಿಷಿ ಪೈಕಿ ಕುಸ್ತಿಗಳನ್ನು ಆಡಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಪತ್ರಕರ್ತ ಹುಳ್ಳಿ ಪ್ರಕಾಶ್ (9448234961) ಅವರನ್ನು ಸಂಪರ್ಕಿಸಬಹುದು.

## ಕೊಟ್ಟೂರು : ಪಂಚಮಸಾಲಿ ಮಹಿಳಾ ಘಟಕದ ಅಧ್ಯಕ್ಷರಾಗಿ ಉಮಾದೇವಿ



ಕೊಟ್ಟೂರು, ಫೆ.14- ಕೊಟ್ಟೂರು ಪಂಚಮಸಾಲಿ ಮಹಿಳಾ ಘಟಕದ ಅಧ್ಯಕ್ಷರಾಗಿ ಉಮಾದೇವಿ, ಗೌರವಾಧ್ಯಕ್ಷರಾಗಿ ಪ್ರೇಮಕ್ಕ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಆಚೆಮನೆ ಭಾರತಿ, ಪವಿತ್ರ, ಸವಿತಾ, ಕಲಾವತಿ ಹಾಗೂ ಜಿ.ಕೊಟ್ರಮ್ಮ, ಪ್ರಧಾನ ಕಾರ್ಯದರ್ಶಿಯಾಗಿ ಕಸ್ತೂರಿ ಪಾಟೀಲ್, ಸಂಘಟನಾ ಕಾರ್ಯದರ್ಶಿಯಾಗಿ ಬಿ.ರತ್ನಮ್ಮ, ಸಾವಿತ್ರಮ್ಮ ಇತರರು ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಎಂ.ಶಿವಣ್ಣ, ಮಲ್ಲೇಶ್ ಹುಲ್ಲುಮನಿ, ನಂಜನಗೌಡ್ರು, ವೀಣಾ ವಿವೇಕಾನಂದಗೌಡ್ರು, ಆಚೆಮನೆ ಮಲ್ಲಿಕಾರ್ಜುನ್ ಇವರುಗಳು ಉಪಸ್ಥಿತರಿದ್ದರು.

## ಪುಲ್ವಾಮಾ ದಾಳಿಯಲ್ಲಿನ ಹುತಾತ್ಮರಿಗೆ ರಾಣೇಬೆನ್ನೂರು ಕಾಂಗ್ರೆಸ್ ಶ್ರದ್ಧಾಂಜಲಿ



ರಾಣೇಬೆನ್ನೂರು, ಫೆ.14- ಪುಲ್ವಾಮಾ ದಾಳಿಯಲ್ಲಿ ವೀರ ಮರಣವನ್ನಪ್ಪಿದ ಯೋಧರ ಸ್ಮರಣಾರ್ಥ ಇಲ್ಲಿನ ಕಾಂಗ್ರೆಸ್ ಪಕ್ಷವು ದೀಪ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಿತು. ಬಸ್ ನಿಲ್ದಾಣದ ಬಳಿ ನಡೆದ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖಂಡರು, ಹುತಾತ್ಮರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು. ನಗರಸಭೆ ಸದಸ್ಯರಾದ ಶಶಿ ಬಸೇನಾಯ್ಕರ, ಲಿಂಗರಾಜ ಕೋಡಿಹಳ್ಳಿ, ಪುಟ್ಟಪ್ಪ ಮರಿಯಮ್ಮನವರ, ಮುಖಂಡರಾದ ಡಾ. ಆರ್.ಎಂ. ಕುಬೇರಪ್ಪ, ಚಂದ್ರಪ್ಪ ಬೇಡರ, ಬಸವರಾಜ ಹುಚ್ಚಗೊಂಡರ, ಬೀರಪ್ಪ ಲಮಾಣಿ, ಸೀತಾರಾಮರೆಡ್ಡಿ, ವೀರನಗೌಡ ಪೊಲೀಸ್‌ಗೌಡ್ರ, ಶೇರು ಕಾಬೂಲಿ, ಮಂಜುನಾಥ ದುಗ್ಗತ್ತಿ, ರಾಜು ಪಿಸೆ, ಎಸ್.ಜೆ. ಸುರಳಿಕೇರಿಮಠ, ಸುರೇಶ್ ಜಾಡಮಾಲಿ, ಕೃಷ್ಣಪ್ಪ ಕಂಬಳಿ, ಬಸವರಾಜ ಕಂಬಳಿ ಮತ್ತಿತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ವೃತ್ತ, ಪೊಲೀಸ್ ಕ್ವಾರ್ಟರ್ಸ್, ಚರ್ಚ್ ರಸ್ತೆ, ಈದ್ಗಾ ಕಾಂಪ್ಲೆಕ್ಸ್, ಅರುಣಾ ಚಿತ್ರ ಮಂದಿರ ಹಾಗೂ ಇತರೆ ಪ್ರದೇಶಗಳು. ದುರ್ಗಾಂಬಿಕ-ವಿಜಯನಗರ ಮಾರ್ಗದ ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ, ಹಾಗೂ ಇತರೆ ಪ್ರದೇಶಗಳಲ್ಲಿ ಅಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

## ಹಳ್ಳಿಗಳಿಗೆ ಹಗಲು ತ್ರೀ-ಫೇಸ್‌ನಲ್ಲಿ ವಿದ್ಯುತ್ ಪೂರೈಕೆಗೆ ಒತ್ತಾಯ

ದಾವಣಗೆರೆ, ಫೆ.14- ಈ ಬಾರಿ ಉತ್ತಮ ಮಳೆಯಾಗಿ ವಿದ್ಯುತ್ ಉತ್ಪಾದನೆಯಲ್ಲಿ ಯಾವುದೇ ಕೊರತೆಯಿಲ್ಲ. ಆದರೂ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದೆ. ರೈತರ ಹಿತದೃಷ್ಟಿಯಿಂದ ಹಗಲು ಹೊತ್ತು 3 ಫೇಸ್‌ನಲ್ಲಿ ಬೆಳಿಗ್ಗೆ 5 ರಿಂದ ಕನಿಷ್ಠ 8 ತಾಸು ವಿದ್ಯುತ್ ಸರಬರಾಜು ಮಾಡಲು ರೈತರ ಪರವಾಗಿ ಜಿ.ಹೆಚ್. ನಾಗರಾಜ್ ಒತ್ತಾಯಿಸಿದ್ದಾರೆ.

ಹೆಚ್.ಕಲಪನಹಳ್ಳಿ, ತೋಳಹುಣಸೆ ಸೇರಿ ಅನೇಕ ಹಳ್ಳಿಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ತೊಂದರೆ ಇದೆ. ರಾತ್ರಿ ವೇಳೆ ಪ್ರಾಣಿಗಳಿಂದ ಭಯಭೀತರಾಗಿ ಜಮೀನಿಗೆ ಹೋಗಿ ನೀರು ಕಟ್ಟಲು ರೈತರಿಗೆ ಸಾಧ್ಯವಾಗುತ್ತಿಲ್ಲ. ಪದೇ ಪದೇ ವಿದ್ಯುತ್ ಏರುಪೇರಾಗಿ ರೈತರ ವಿದ್ಯುತ್ ಸಲಕರಣೆಗಳು ಸಹ ಹಾಳಾಗುತ್ತಿವೆ.

ಈ ಬಗ್ಗೆ ಮುಖ್ಯಮಂತ್ರಿಗಳು ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

## ನಗರದಲ್ಲಿಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದು ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

## 'ಯೋಗಿ'ಗಳಾದರೆ ಸುಖೀ ಸಮಾಜ ಸಾಧ್ಯ

(1ನೇ ಪುಟದಿಂದ) ಉಳಿಯುವಂತೆ ಶಶಿಕಲಾ ಶಂಕರಮೂರ್ತಿ ಅವರು ಅಭಿನಂದನಾ ಗ್ರಂಥ ತಂದಿದ್ದಾರೆ. ಈ ಗ್ರಂಥವನ್ನು ಕೊಂಡು ಓದಿದರೆ ಪ್ರಕಾಶಕರಿಗೆ ಮತ್ತೊಂದಿಷ್ಟು ಕೆಲಸ ಮಾಡಲು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಹೇಳಿದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ, ಗರ್ಭದಿಂದ ಗೋರಿಯವರಿಗೂ ಸಾಗುವ ಪಯಣ ಇತಿಹಾಸದಲ್ಲಿ ವಿಲೀನ ಆದಾಗ ಬದುಕಿಗೆ ಶ್ರೇಷ್ಠತೆ ಕಂಡುಕೊಳ್ಳಲು ಸಾಧ್ಯ ಎಂದರು.

ಆಸ್ತಿ, ಅಧಿಕಾರ, ಹಿಂಬಾಲಕರಿಂದ ವ್ಯಕ್ತಿಯ ಬಾಹ್ಯ ಸೌಂದರ್ಯ ಹೆಚ್ಚುತ್ತದೆ. ಆದರೆ ಅವುಗಳು ಆ ವ್ಯಕ್ತಿಯ ಅಂತರಂಗದ ಮೌಲ್ಯ ಕಾಪಾಡುವುದಿಲ್ಲ. ಅಧಿಕಾರ,ಆಸ್ತಿ ಕಳೆದಂತೆ ವ್ಯಕ್ತಿಯ ಮೌಲ್ಯವೂ ಕಳೆದುಹೋಗುತ್ತದೆ. ವಿನಯತೆ ಮೈಗೂಡಿಸಿಕೊಂಡು ಎಲ್ಲರನ್ನೂ ಗೌರವಿಸುವ ವ್ಯಕ್ತಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಲು ಸಾಧ್ಯ ಎಂದರು.

ಅಭಿನಂದನಾ ಗ್ರಂಥದ ಕುರಿತು ಮಾತನಾಡಿದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲ ಡಾ.ಹೆಚ್.ವಿ. ವಾಮದೇವಪ್ಪ, ಶಿಕ್ಷಣ ಯೋಗಿ ಗ್ರಂಥವು ಪ್ರತಿಯೊಬ್ಬ ಶಿಕ್ಷಕರಿಗೂ ಅಗತ್ಯವಾದ ಸಂಗ್ರಹ ಯೋಗ್ಯ ಎಂದು ಹೇಳಿದರು.


ಲಿಂಗರಾಜು ಅವರು ಸೃಜನ ಶೀಲ ಚಿಂತಕ, ಸಂಶೋಧನೆ ಮೂಲಕ ಸದಾ ಹೊಸತನ್ನು ಕಂಡು ಹಿಡಿದು ಅದನ್ನು ವೃತ್ತಿಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುವವರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರ ಬಗ್ಗೆ ಈ ಗ್ರಂಥದಲ್ಲಿ 124 ಜನರು ಬರೆದ ಲೇಖನಗಳನ್ನು ಸಂಗ್ರಹಿಸಿ, 8 ಭಾಗಗಳನ್ನಾಗಿ ವ್ಯವಸ್ಥೆಗೊಳಿಸಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಹೆಚ್.ಕೆ. ಲಿಂಗರಾಜು ಹಾಗೂ ಶ್ರೀಮತಿ ಟಿ.ಜಿ.ಲೀಲಾವತಿ ದಂಪತಿಗೆ ಅಭಿನಂದನೆ ಸಲ್ಲಿಸಲಾಯಿತು. ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಲಿಂಗರಾಜು ಅವರ ಸ್ನೇಹಿತರು, ಹಿತೈಷಿಗಳು ಅಭಿನಂದನಾ ಮಳೆಗೈದರು. ಸೌಹಾರ್ದ ಪ್ರಕಾಶನದ ಪ್ರಕಾಶಕರಾದ ಎ.ಸಿ. ಶಶಿಕಲಾ ಶಂಕರಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರೂ, ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಆಡಳಿತಾಧಿಕಾರಿಗಳೂ ಆದ ಪ್ರೊ.ಎಸ್.ಬಿ. ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು. ದಾವಣಗೆರೆ ತಾಲ್ಲೂಕು ಕ.ಸಾ.ಪ. ಅಧ್ಯಕ್ಷ ಬಿ.ವಾಮದೇವಪ್ಪ, ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥೆ ಜಸ್ಟಿನ್ ಡಿ.ಸೌಜ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಟಿ. ಶಾಂತಗಂಗಾಧರ್, ನೀಲಕಂಠಪ್ಪ, ಪಾಲಾಕ್ಷಪ್ಪ, ಪ್ರೊ.ಮುರಿಗೇಂದ್ರಪ್ಪ, ಬಸಂತಕುಮಾರ್ ಇತರರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಜಿಲ್ಲಾ ಮಟ್ಟದ ಕಥಾ ಸ್ಪರ್ಧೆ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಶ್ರೀ ಸಿದ್ಧಗಂಗಾ ಶಾಲಾ ಮಕ್ಕಳು ಆರಂಭದಲ್ಲಿ ನಾಡಗೀತೆ ಹಾಡಿ, ನಂತರ ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಸಂಗೀತ ಶಿಕ್ಷಕಿ ಐ.ಕೆ. ಉಮಾದೇವಿ ಪ್ರಾರ್ಥಿಸಿದರು. ಮುಖ್ಯ ಶಿಕ್ಷಕಿ ಕೆ.ಎಂ. ಗಿರಿಜಮ್ಮ ಸ್ವಾಗತಿಸಿದರು. ಉಪನ್ಯಾಸಕರಾದ ಗೀತಾ ಬಸವರಾಜ್, ಲೋಲಾಕ್ಷಿ ನಿರೂಪಿಸಿದರು. ಶಿಕ್ಷಕಿ ಕಲ್ಪನಾ ವಂದಿಸಿದರು.


### ಶ್ರೀಮತಿ ಎನ್. ಬಸಮ್ಮ ನಿಧನ



ದಾವಣಗೆರೆ ಆಂಜನೇಯ ಬಡಾವಣೆ ವಾಸಿ ಹಾಲೇಕಲ್ಲು ನಿಂಬಳಗೆರೆ ದಿ. ಬಸವರಾಜಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಎನ್.ಬಸಮ್ಮ (67)**

ಅವರು ದಿನಾಂಕ 14.02.2021 ರಂದು ಭಾನುವಾರ ರಾತ್ರಿ 8 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.02.2021 ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬದವರು:- **ನಿಂಬಳಗೆರೆ ವಂಶಸ್ಥರು ಹಾಗೂ ಹಾಲೇಕಲ್ಲು ಗ್ರಾಮಸ್ಥರು. ಮೊ: 99450 89904**


### ಪೌರಕಾರ್ಮಿಕರಾದ ಕೊಂಡಜ್ಜಿ ಗಂಗಮ್ಮ ನಿಧನ



ದಾವಣಗೆರೆ ಬೂದಾಳು ರಸ್ತೆಯ ಎಸ್.ಪಿ.ಎಸ್. ನಗರದ ವಾಸಿ, ಪೊಲೀಸ್ ಇಲಾಖೆ ಜಿ. ಹನುಮಂತಪ್ಪ ಇವರ ತಾಯಿ, ಶ್ರೀಮತಿ ಕೊಂಡಜ್ಜಿ ಗಂಗಮ್ಮ (58) ಅವರು ದಿನಾಂಕ 14.02.2021ರ ಭಾನುವಾರ ಸಂಜೆ 5 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.02.2021ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.


ದುಃಖತಪ್ತ ಕುಟುಂಬ ವರ್ಗ
ಕೊಂಡಜ್ಜಿ ವಂಶಸ್ಥರು ಮತ್ತು ಬಂಧು-ಮಿತ್ರರು, ದಾವಣಗೆರೆ.
ಮೊ. : 96868 66708, 74839 98366

### ಮಂಡಕ್ಕಿ ಬಸಮ್ಮ ನಿಧನ



ಹರಪನಹಳ್ಳಿ ಪಟ್ಟಣದ ವಾಲ್ಮೀಕಿ ನಗರ ವಾಸಿ ನ್ಯಾಯಧೀಶರಾಗಿದ್ದ ದಿವಂಗತ ಮಂಡಕ್ಕಿ ಹನುಮಂತಪ್ಪ ಇವರ ತಾಯಿ ಮಂಡಕ್ಕಿ ಬಸಮ್ಮ (85) ಇವರು ದಿನಾಂಕ 14.02. 2021 ನೇ ಭಾನುವಾರ ರಾತ್ರಿ 8.40ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 3 ಜನ ಪುತ್ರರು. ಐವರು ಪುತ್ರಿಯರು. ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ 15.02 2021ನೇ ಸೊಮವಾರ ಮಧ್ಯಾಹ್ನ 12 ಗಂಟೆಗೆ ವಾಲ್ಮೀಕಿ ರುದ್ರಭೂಮಿಯಲ್ಲಿ ನೆರವೇರಲಿದೆ.

### ಸೈಯದ್ ಮುಜಾಹಿದ್ ಸಾಹೇಬ್ ನಿಧನ




ಹರಿಹರ ನಗರದ ಲದ್ವಾ ಓಣಿ, ಇಮಾಮ್ ಮಹಲ್ ವಾಸಿ ದಿ|| ಸೈಯದ್ ಖಲೀಲ್ ಸಾಹೇಬ್ ಅವರ ಪುತ್ರ ಸೈಯದ್ ಮುಜಾಹಿದ್ (68) ಅವರು ದಿನಾಂಕ 14.02.2021ರ ಭಾನುವಾರ ರಾತ್ರಿ 10 ಗಂಟೆಗೆ ನಿಧನರಾದರು. ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ 15.02.2021ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಹರಿಹರದಲ್ಲಿರುವ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.

# ಎಸ್‌ಟಿ, ಒಬಿಸಿ ಪಟ್ಟಿಗೆ ಸೇರ್ಪಡೆ ಹೇಗೆ?

**ಯಾವುದೇ ಸಮುದಾಯವನ್ನು ಎಸ್‌ಟಿ, ಒಬಿಸಿ ಪಟ್ಟಿಗೆ ಸೇರ್ಪಡೆ ಮಾಡಬೇಕಾದರೆ ಅಸ್ತಿತ್ವದಲ್ಲಿರುವ ಅಧಿನಿಯಮ-ನಿಯಮಗಳನ್ನು ಪಾಲಿಸಲೇಬೇಕು. ಅವು ಯಾವುವು? ಇದು ನಿಜಕ್ಕೂ ಸಾಧ್ಯವೇ? ಎಂಬುದರ ಕುರಿತ ಸಂಕ್ಷಿಪ್ತ ವಿವರಣೆ**

ಕೃಪೆ : ವಿಕ ಅಂತರಜಾಲ

ಕುರುಬರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದು ಹೋರಾಟಕ್ಕೆ ಇಳಿದಿದ್ದರೆ, ಲಿಂಗಾಯತರು ತಮ್ಮನ್ನು ಕೇಂದ್ರ ಸರಕಾರದ ಹಿಂದುಳಿದ ವರ್ಗಕ್ಕೆ ಸೇರಿಸಿ ಎಂದು ಆಗ್ರಹಿಸುತ್ತಿವೆ. ಯಾವುದೇ ಸಮುದಾಯವನ್ನು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕೆಂದರೆ, ಅಸ್ತಿತ್ವದಲ್ಲಿರುವ ಅಧಿನಿಯಮ-ನಿಯಮಗಳನ್ನು ಪಾಲಿಸಲೇಬೇಕು. ಅಂಥ ನಿಯಮಗಳು ಯಾವುವು? ಇದು ನಿಜಕ್ಕೂ ಸಾಧ್ಯವೇ? ಎಂಬುದರ ಕುರಿತು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಅವರು ನೀಡಿರುವ ಮಾಹಿತಿ.



## ಯಾವ ಜಾತಿ, ಸಮುದಾಯ ಮೀಸಲು ಪಡೆಯಲು ಅರ್ಹ

ಸಂವಿಧಾನದ ಅನುಚ್ಛೇದ 15(4) ರಂತೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲು ನೀಡಬೇಕು. ಎರಡು ವರ್ಷಗಳ ಹಿಂದೆ ಕೇಂದ್ರ ಸರಕಾರ ಸರಕಾರ ಸಂವಿಧಾನದ 103ನೇ ತಿದ್ದುಪಡಿ ತಂದು, ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯವರಿಗೂ ಮೀಸಲು ನೀತಿ ಕಲ್ಪಿಸಿದೆ.

## ಹಿಂದುಳಿದ ವರ್ಗಗಳನ್ನು ಗುರುತಿಸುವುದು ಹೇಗೆ?

1977ರಲ್ಲಿ ಅಧಿಕಾರಕ್ಕೆ ಬಂದ ಮೊರಾರ್ಜಿ ದೇಸಾಯಿ ಸರಕಾರ ಹಿಂದುಳಿದ ವರ್ಗಗಳನ್ನು ಗುರುತಿಸಲು ಬಿ.ಪಿ.ಮಂಡಲ್ ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿತು. ಮಂಡಲ್ ಆಯೋಗ 1980ರಲ್ಲಿ ನೀಡಿದ ವರದಿ ಪ್ರಕಾರ ಭಾರತದ 3743 ಜಾತಿ-ಉಪಜಾತಿಗಳನ್ನು ಸಾಮಾಜಿಕ ವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಗಳೆಂದು ಗುರುತಿಸಲಾಗಿದೆ. ಈ ಪೈಕಿ ಕರ್ನಾಟಕದ 323 ಜಾತಿ-ಉಪಜಾತಿಗಳೂ ಸೇರಿವೆ.

ಈ ವರದಿ ಆಧರಿಸಿ ಕೇಂದ್ರ ಸರಕಾರ ಹಿಂದುಳಿದ ವರ್ಗಗಳಿಗೆ 1992ರಲ್ಲಿ ಮೀಸಲು ನೀತಿ ಕಲ್ಪಿಸಿತು. ಬಳಿಕ ಸುಪ್ರೀಂಕೋರ್ಟ್ ಸೂಚನೆ ಅನ್ವಯ, ಕೇಂದ್ರ ಸರಕಾರ 1993ರಲ್ಲಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನೇ ಕಾಯಿದೆ ಅನುಸಾರ ರಚಿಸಿತು. ಬಳಿಕ ಕಾಲ ಕಾಲಕ್ಕೆ ಕರ್ನಾಟಕದ 283 ಜಾತಿ-ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು, ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲಾಗಿದೆ. ಪ್ರಸ್ತುತ ಕೇಂದ್ರ ಸರಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಕರ್ನಾಟಕದ 606 ಜಾತಿ-ಉಪಜಾತಿಗಳಿವೆ.



## ಒಬಿಸಿ ಪಟ್ಟಿಗೆ ಸೇರಿಸಲು ಪ್ರಕ್ರಿಯೆ ಹೇಗೆ ?

ಹಾಲಿ ಕಾಯಿದೆ ಅನುಸಾರ ರಾಷ್ಟ್ರಪತಿಗಳು ಹಾಗೂ ರಾಜ್ಯಪಾಲರ ಸಲಹೆ ಮೇರೆಗೆ, ಹಿಂದುಳಿದ ವರ್ಗಗಳನ್ನು ಕೇಂದ್ರ ಪಟ್ಟಿಗೆ ಸೇರಿಸುವ ಅಥವಾ ಪಟ್ಟಿಯಿಂದ ಹೊರಗಿಡುವ ಅಧಿಕಾರವನ್ನು ಸಂಸತ್ ಹೊಂದಿದೆ. ಆದರೆ, ಎರಡು ವರ್ಷಗಳಿಂದ, ಈ ಕುರಿತು ನಿಯಮಗಳನ್ನೇ ಸರ್ಕಾರ ರೂಪಿಸಿಲ್ಲ. ಹಾಗಾಗಿ, ಈ ಅವಧಿಯಲ್ಲಿ ದೇಶದ ಯಾವುದೇ ಜಾತಿಗಳನ್ನು ಹಿಂದುಳಿದ ಪಟ್ಟಿಗೆ ಸೇರಿಸಿಲ್ಲ.

## ಮೀಸಲಿಗೆ ಸಂಬಂಧಿಸಿದಂತೆ ಆಯೋಗಕ್ಕೆ ಬೇರೆ ಅಧಿಕಾರ ಇದೆಯೇ?

ಪ್ರತಿ 10 ವರ್ಷಗಳಿಗೊಮ್ಮೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸಿ, ಅಲ್ಲಿಂದ ಅನರ್ಹ ವಾದ ಜಾತಿ ಸಮುದಾಯಗಳನ್ನು ಪಟ್ಟಿ ಯಿಂದ ಕೈಬಿಡುವ ಅಧಿಕಾರ ಮೊದಲು ಹಿಂದುಳಿದ ವರ್ಗಗಳ ಆಯೋಗಕ್ಕೆ ಇತ್ತು. ಆದರೆ, ಈ ಅಧಿಕಾರ ವನ್ನು ಆಯೋಗ ಯಾವತ್ತೂ ಬಳಕೆ ಮಾಡಿರಲಿಲ್ಲ. 2018ರಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರವು ಸಂವಿಧಾನದ 102ನೇ ವಿಧಿಗೆ ತಿದ್ದುಪಡಿ ತಂದು, ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಾಂವಿಧಾನಿಕ ಸ್ಥಾನ-ಮಾನ ನೀಡಿತು. ಇದೇ ವೇಳೆ ಹಿಂದುಳಿದ ವರ್ಗಗಳ ಪಟ್ಟಿಗೆ ಜಾತಿ-ಉಪಜಾತಿಗಳ ಹೊಸ ಸೇರ್ಪಡೆಗೆ ಶಿಫಾರಸು ಮಾಡಲು ಇದ್ದ ಅಧಿಕಾರವನ್ನು ಮೊಟಕುಗೊಳಿಸಿತು.

## ಪರಿಶಿಷ್ಟ ಪಂಗಡ ಪಟ್ಟಿ ಸೇರಲು ಅರ್ಹತೆಗಳು ಏನು?

ಪರಿಶಿಷ್ಟ ಪಂಗಡ ಸೇರಲು ಬಯಸುವ ಜಾತಿ/ಸಮುದಾಯದ 'ಕುಲ ಶಾಸ್ತ್ರೀಯ ಅಧ್ಯಯನ' ನಡೆಯಲೇಬೇಕು. ಅಧ್ಯಯನ ಮಾಡಲು ಅರ್ಹತೆ ಹೊಂದಿರುವ 'ಮಾನವ ಶಾಸ್ತ್ರಜ್ಞ'ರೇ ಆಗಬೇಕು. ಯಾವುದೇ ಒಂದು ಜಾತಿಯನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಪ್ರಮುಖವಾಗಿ 5 ಗುಣಲಕ್ಷಣಗಳನ್ನು ಹೊಂದಿರಬೇಕು. ಆದಿಮ-ಪ್ರಾಚೀನತೆ ಹೊಂದಿರುವ, ವಿಶಿಷ್ಟ ಬಗೆಯ ಸಂಸ್ಕೃತಿ ಒಳಗೊಂಡ, ಭೌಗೋಳಿಕವಾಗಿ ಪ್ರತ್ಯೇಕವಾಗಿ ವಾಸಿಸುತ್ತಿರುವ, ಸಂಕೋಚ ಅಥವಾ ನಾಚಿಕೆ ಭಾವನೆಯಿಂದ ಅನ್ಯ ಸಮುದಾಯ ಅಥವಾ ಜಾತಿಗಳೊಡನೆ ಬೆರೆಯದಿರುವ ಹಾಗೂ ಕೆಳಮಟ್ಟದ ಸಮಾಜೋಆರ್ಥಿಕ ಪರಿಸ್ಥಿತಿಯಿಂದ ಕೂಡಿರುವ ಜಾತಿಯನ್ನು ಮಾತ್ರ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಸಾಧ್ಯ.

## ಎಸ್‌ಟಿ ಸೇರ್ಪಡೆಗೆ ಮುನ್ನ....

ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಜಾತಿ/ಸಮುದಾಯ ಕುರಿತು ರಾಜ್ಯ ಸರ್ಕಾರ ಸಲ್ಲಿಸುವ ಪ್ರಸ್ತಾವನೆಯನ್ನು ಮೊದಲಿಗೆ ಆರ್‌ಜಿಐ (ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ) ಕೂಲಂಕುಶ ವಾಗಿ ಪರಿಶೀಲನೆ ಮಾಡುತ್ತದೆ. ರಾಷ್ಟ್ರೀಯ ಪರಿಶಿಷ್ಟ ಬುಡಕಟ್ಟುಗಳ ಆಯೋಗ ಅಭಿಪ್ರಾಯ ನೀಡುತ್ತದೆ. ಬಳಿಕ ಕೇಂದ್ರ ಸಚಿವ ಸಂಪುಟದ ಅನುಮೋದನೆ ಬೇಕು. ಬಳಿಕ ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಿ ಒಪ್ಪಿಗೆ ಪಡೆದು, ನಂತರ ರಾಷ್ಟ್ರಪತಿಗಳ ಅಂಗೀಕಾರವನ್ನೂ ಪಡೆಯಬೇಕು.

# ಪ್ರೊ. ಬಿ. ಕೃಷ್ಣಪ್ಪ ಹುಟ್ಟಿ ಬೆಳೆದ ಹರಿಹರದ ಮನೆಯನ್ನು ಸ್ಮಾರಕ ಮಾಡಬೇಕು

## ಹರಿಹರದಲ್ಲಿರುವ ಕೃಷ್ಣಪ್ಪನವರ ನಿವಾಸಕ್ಕೆ ನಿವೃತ್ತ ನ್ಯಾಯಾಧೀಶ ಕಾಳಪ್ಪ ಗೋಕಳೆ ಭೇಟಿ

ಹರಿಹರ, ಫೆ.14- ದೂರ ದೃಷ್ಟಿಯ ಕಲ್ಪನೆ, ಸಮಾಜಮುಖಿ ಆಲೋಚನೆ ಮೈಗೂಡಿಸಿಕೊಂಡಿದ್ದ ಪ್ರೊ. ಬಿ. ಕೃಷ್ಣಪ್ಪ ಅವರು ಶೋಷಿತರ ಶ್ರೇಯಸ್ಸಿಗಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಘಟನೆಯನ್ನು ಹುಟ್ಟು ಹಾಕಿದ ಸಮಾಜ ಚಿಂತಕರು ಎಂದು ನಿವೃತ್ತ ನ್ಯಾಯಾಧೀಶರಾದ ಕಾಳಪ್ಪ ಗೋಕಳೆ ಹೇಳಿದರು.



ನಗರದ ಪರಿಶಿಷ್ಟರ ಕಾಲೊನಿಯಲ್ಲಿರುವ ಪ್ರೊ. ಬಿ. ಕೃಷ್ಣಪ್ಪನವರ ಮನೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಾತನಾಡಿದ ಅವರು, ಒಂದು ಕಾಲದಲ್ಲಿ ಜಾತಿ ವಿನಾಶ, ಅಸ್ಪೃಶ್ಯತೆ ವಿನಾಶ, ಸರ್ವರಿಗೂ ಶಿಕ್ಷಣ, ಮೌಢ್ಯ, ಕಂದಾಚಾರ ವಿನಾಶ, ಭೂ ರಹಿತರಿಗೆ ಭೂಮಿ ಹಂಚಿಕೆ ಹೀಗೆ ಹತ್ತು ಹಲವು ವಿಷಯಗಳನ್ನು ಆಧರಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯನ್ನು ಹುಟ್ಟುಹಾಕಿ ರಾಜ್ಯದ ಉದ್ದಗಲಕ್ಕೂ ಹೋರಾಟ ಧರಣಿಗಳನ್ನು ಮಾಡುತ್ತಾ ತುಳಿತಕ್ಕೊಳಗಾದ ಜನಾಂಗಕ್ಕೆ ನ್ಯಾಯ ದೊರಕಿಸಿಕೊಟ್ಟ ಮಹಾನ್ ಚೇತನ ಕೃಷ್ಣಪ್ಪನವರು ಎಂದರು.

ಹೋರಾಟದ ಜತೆ ಜತೆಗೆ ಕನ್ನಡ ಪ್ರಾಧ್ಯಾಪಕ ರಾಗಿಯೂ ವಿದ್ಯಾರ್ಥಿಗಳಲ್ಲಿ ಚಳವಳಿಯ ಕಿಚ್ಚು ಹಚ್ಚಿದರು. ಇದಕ್ಕಾಗಿ ಕರ್ನಾಟಕ ದಲಿತ ವಿದ್ಯಾರ್ಥಿಗಳ ಒಕ್ಕೂಟವನ್ನು ಕೃಷ್ಣಪ್ಪನವರು ಸ್ಥಾಪಿಸಿದರು. ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕಾಗಿಯೇ ಪ್ರಾಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿದರು. ಮೂರು ದಶಕಗಳ ಕಾಲ ಹೋರಾಟವನ್ನು ಉಸಿರಾಗಿಸಿಕೊಂಡಿದ್ದ ಪ್ರೊಫೆಸರ್ ಕೃಷ್ಣಪ್ಪನವರು, ಹರಿಹರದ ಪರಿಶಿಷ್ಟರ ಕಾಲೋನಿಯಲ್ಲಿ ಹುಟ್ಟಿ ಬೆಳೆದು ನಾಡಿನಲ್ಲೇ ದಲಿತ ಪ್ರಜ್ಞೆ ಹುಟ್ಟು ಹಾಕಿದ ಮಹಾನ್ ಚೇತನ ಪ್ರೊ. ಬಿ.ಕೃಷ್ಣಪ್ಪನವರ ಆದರ್ಶ ಮೌಲ್ಯಗಳನ್ನು ಮೈಗೂಡಿಸಿಕೊಂಡು ಈಗಿನ ಯುವಕರು ನಡೆದು ಕೊಂಡು ಹೋಗಿ, ಒಗ್ಗಟ್ಟಾಗಿ ಹೋರಾಟಗಳನ್ನು ಮಾಡಿ ಅನ್ಯಾಯ, ತುಳಿತಕ್ಕೊಳಗಾದವರಿಗೆ ನ್ಯಾಯ ದೊರಕಿಸಿ ಕೊಡುವಂತೆ ಸತ್ಕಾರ್ಯಗಳನ್ನು ಮಾಡಬೇಕು.

ಕುವೆಂಪುರವರು ಹುಟ್ಟಿ ಬೆಳೆದ ಕುಪ್ಪಳ್ಳಿಯಲ್ಲಿನ ಮನೆಯನ್ನು ಸ್ಮಾರಕ ಮಾಡಿರುವ ರೀತಿ, ಹರಿಹರ ನಗರದ ಎಕೆ ಕಾಲೋನಿಯಲ್ಲಿರುವ ಪ್ರೊ. ಕೃಷ್ಣಪ್ಪನವರು ಹುಟ್ಟಿ ಬೆಳೆದ ಮನೆಯನ್ನು ಸ್ಮಾರಕ ಮಾಡಿದರೆ, ಹೋರಾಟಗಾರರಿಗೆ ಪ್ರೇರಣೆಯಾಗುತ್ತದೆ ಎಂದು ಅವರ ಕುಟುಂಬದ ಸಹೋದರ ಮಾಜಿ ದೂಡ ಸದಸ್ಯ ಎಚ್. ನಿಜಗುಣ ಹೇಳಿದರು.

ಈ ಸಂದರ್ಭದಲ್ಲಿ ನಿರಂಜನ್, ವಾಸುದೇವ್, ಹನಮಂತಪ್ಪ, ಎಚ್. ಮಲ್ಲೇಶ್, ಡಿ. ಹನುಮಂತಪ್ಪ, ಕೇಶವ ಕಂಚಿಕೇರಿ, ಆನಂದ್, ಬಸವರಾಜ್, ಎಂ.ಎಸ್ ಶ್ರೀನಿವಾಸ್, ಶಂಕರ್ ಮೂರ್ತಿ, ಸುರೇಂದ್ರ, ನಿರಂಜನಮೂರ್ತಿ, ವೈ.ಬಿ. ಪ್ರಭಾಕರ್, ಪಿ. ರವಿಚಂದ್ರ ಮತ್ತಿತರರು ಉಪಸ್ಥಿತರಿದ್ದರು.

# ಮರೆಯೆವು, ಕ್ಷಮಿಸೆವು : ಪುಲ್ವಾಮಾ ದಾಳಿ ಹುತಾತ್ಮರಿಗೆ ಸಿಆರ್‌ಪಿಎಫ್ ನಮನ

ನವದೆಹಲಿ, ಫೆ. 14 – ಪುಲ್ವಾಮಾ ದಾಳಿಗೆ ಸಿಲುಕಿ ಸೈನಿಕರು ಹುತಾತ್ಮರಾಗಿದ್ದನ್ನು ದೇಶ ಮರೆಯುವುದಿಲ್ಲ ಹಾಗೂ ಇದಕ್ಕೆ ಕಾರಣರಾದವರನ್ನು ಕ್ಷಮಿಸುವುದಿಲ್ಲ ಎಂದು ಸಿ. ಆರ್.ಪಿ.ಎಫ್. ತಿಳಿಸಿದೆ. ಪುಲ್ವಾಮಾ ಉಗ್ರವಾದಿ ದಾಳಿಯಲ್ಲಿ ಸಿ.ಆರ್.ಪಿ.ಎಫ್.ನ 40 ಯೋಧರು ಹುತಾತ್ಮರಾಗಿದ್ದರು.

ದಾಳಿಯ ಎರಡನೇ ವರ್ಷದ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಲೆತ್ಪೊರದ ಶಿಬಿರದಲ್ಲಿ ಹುತಾತ್ಮರಿಗೆ ನಮನ ಸಲ್ಲಿಸಲಾಯಿತು. ದೆಹಲಿಯ ಕೇಂದ್ರ ಕಚೇರಿಯಲ್ಲಿ ಸಿ.ಆರ್.ಪಿ.ಎಫ್.ನ ಹಿರಿಯ ಅಧಿಕಾರಿಗಳು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಬಗ್ಗೆ ಟ್ವೀಟ್ ಮಾಡಿರುವ ಸಿ.ಆರ್.ಪಿ.ಎಫ್. ವಕ್ತಾರ ಡಿಐಜಿ ಮೋಸಸ್ ದಿನಕರನ್, 'ಕ್ಷಮಿಸಿಲ್ಲ, ಮರೆಯುವುದಿಲ್ಲ : ದೇಶಕ್ಕಾಗಿ ಸರ್ವೋನ್ನತ ತ್ಯಾಗ ಮಾಡಿದ ನಮ್ಮ ಸಹೋದರರಿಗೆ ವಂದನೆಗಳು' ಎಂದಿದ್ದಾರೆ. ನಾವು ದಿಟ್ಟ ಯೋಧರ ಕುಟುಂಬದ ಜೊತೆ ನಿಲ್ಲುತ್ತೇವೆ ಎಂದೂ ಅವರು ತಿಳಿಸಿದ್ದಾರೆ.

ಪುಲ್ವಾಮಾ ದಾಳಿ ನಂತರ ಫೆಬ್ರವರಿ 26, 2019ರಂದು ಪಾಕಿಸ್ತಾನದ ಬಾಲಕೋಟ್‌ನಲ್ಲಿರುವ ಉಗ್ರವಾದಿ ಶಿಬಿರಗಳ ಮೇಲೆ ಭಾರತೀಯ ವಾಯುಪಡೆ ವೈಮಾನಿಕ ದಾಳಿ ನಡೆಸಿತ್ತು.

ಹುತಾತ್ಮರಿಗೆ ನಮನ ಸಂದರ್ಭದಲ್ಲಿ ಸಿ. ಆರ್.ಪಿ.ಎಫ್.ನ ಮುಖ್ಯಸ್ಥರಾದ ಎ.ಪಿ. ಮಹೇಶ್ವರಿ ಅವರು 40 ಹುತಾತ್ಮರ ಕುರಿತ ವಿಡಿಯೋ ಬುಕ್ ಒಂದನ್ನು ಬಿಡುಗಡೆ ಮಾಡಿದರು. ಈ ವಿಡಿಯೋದಲ್ಲಿ 300 ನಿಮಿಷಗಳ 80 ಕಂತುಗಳಿವೆ. ಇದನ್ನು ಹತರಾದ ಪ್ರತಿಯೊಬ್ಬ ಕುಟುಂಬದವರಿಗೆ ಕಳಿಸಲಾಗುವುದು.

# ಮಕ್ಕಳ ಸ್ನೇಹಿ ಅಭಿಯಾನ ಎಲ್ಲಾ ಶಾಲೆಗಳಲ್ಲಿ ಅಳವಡಿಸಬೇಕು

ಹರಪನಹಳ್ಳಿ, ಫೆ.14 - ಗ್ರಾಮ ಪಂಚಾಯತಿ ಮಕ್ಕಳ ಸ್ನೇಹಿ ಅಭಿಯಾನ ಕಾರ್ಯಕ್ರಮವನ್ನು ಎಲ್ಲಾ ಶಾಲೆಗಳಲ್ಲಿ ಅಳವಡಿಸಿದರೆ ವಿದ್ಯಾರ್ಥಿಗಳು ಕ್ರಿಯಾಶೀಲರಾಗಿರುತ್ತಾರೆ ಎಂದು ತಾಲ್ಲೂಕು ಪಂಚಾಯಿತಿ ಸದಸ್ಯ ಎಂ.ಪ್ರಕಾಶ್ ಹೇಳಿದರು

ತಾಲ್ಲೂಕಿನ ಕಡಬಗೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ದಡಿ ಸಮುದಾಯ ಆಧಾರಿತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳನ್ನು ಪೋಷಕರು ಶಾಲೆಯನ್ನು ಅರ್ಧಕ್ಕೆ ಬಿಡಿಸಿ ಹೊಲಗಳಲ್ಲಿ ಕೆಲಸ ಮಾಡಿಸಿ ಬಾಲ ಕಾರ್ಮಿಕರನ್ನಾಗಿಸಿ ಬಾಲ್ಯ ವಿವಾಹ ಮಾಡುವುದು ತಪ್ಪು. ಏನೂ ತಿಳಿಯದ ಮಗುವನ್ನು ಸಂಕಷ್ಟಕ್ಕೆ ದೂಡುತ್ತಾರೆ. ಕಾನೂನು ಮತ್ತು ಕಾಯ್ದೆ ಬಗ್ಗೆ ಪೋಷಕರಿಗೆ ತಿಳಿವಳಿಕೆ ನೀಡಬೇಕು ಮತ್ತು ಓದು ಬೆಳಕು ಕಾರ್ಯಕ್ರಮದ ಅಡಿಯಲ್ಲಿ ವಿವಿಧ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು ಎಂದರು.



ಹರಪನಹಳ್ಳಿ ತಾ.ಪಂ ಸದಸ್ಯ ಎಂ.ಪ್ರಕಾಶ್

ಎಸ್.ಡಿ.ಎಂ.ಸಿ ಅಧ್ಯಕ್ಷ ವೀರಣ್ಣ ಅಧ್ಯಕ್ಷತೆ ವಹಿಸಿದ್ದರು, ಶಾಲೆಯ ಮುಖ್ಯ ಶಿಕ್ಷಕ ಎಸ್. ಬಸವರಾಜ, ಸಿ.ಆರ್.ಪಿ. ಅಬ್ದುಲ್ ಸಲಾಂ, ಗ್ರಾ.ಪಂ ಅಧ್ಯಕ್ಷರಾದ ಅನುಷ ಮಂಜುನಾಥ, ಉಪಾಧ್ಯಕ್ಷರಾದ ಬಿ. ಮಂಜಮ್ಮ, ಸದಸ್ಯರುಗಳಾದ ಎಂ.ಹನುಮಂತಪ್ಪ, ಬಿ.ಶೈಲಜಾ, ಸಂಪ ನ್ಮೂಲ ವ್ಯಕ್ತಿಗಳಾದ ಕೆ.ಮೂಗಪ್ಪ, ಜಿ.ಲಿಂಗರಾಜ್, ರತ್ನಮ್ಮ, ಮುಖಂಡರಾದ ಬಿ.ನಾಗರಾಜ, ಬಿ.ಸಿದ್ದೇಶ, ಹೆಚ್.ಶೃತಿ ಭಾಗವಹಿಸಿ ದ್ದರು. ಕೊನೆಯಲ್ಲಿ ಮಕ್ಕಳಿಂದ ಜಾಗೃತಿ ನಾಟಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರವನ್ನು ಸಾಸ್ವಿಹಳ್ಳಿಯ ಸಂಗಮೇಶ್ವರ ಕಲಾ ಸಂಘ ಇವರಿಂದ ಸಂಗೀತ ಕಾರ್ಯಕ್ರಮ ಜರುಗಿತು.

# ಸಮಾನತೆಗೆ ಮುಸ್ಲಿಮ್ ಮಂಡಳಿ ವಿರೋಧ

**(1ನೇ ಪುಟದಿಂದ)** ಎ.ಐ.ಎಂ.ಪಿ.ಎಲ್.ಬಿ., ಸಂವಿಧಾನದ 14,15,21 ಹಾಗೂ 44ನೇ ವಿಧಿಗಳನ್ನು ಪರಿಗಣಿಸಿ ವೈಯಕ್ತಿಕ ಕಾನೂನುಗಳನ್ನು ಪರೀಕ್ಷೆ ಮಾಡಬಾರದು ಎಂದು ಕೇಳಿದೆ.

ಉಪಾಧ್ಯಾಯ್ ದಾಖಲಿಸಿದ ಅರ್ಜಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಕಳೆದ ವರ್ಷ ಡಿಸೆಂಬರ್ 16ರಂದು ನೋಟಿಸ್ ಕಳಿಸಿತ್ತು.

ಸಂವಿಧಾನದಲ್ಲಿ ಸಾಕಷ್ಟು ಅವಕಾಶಗಳಿದ್ದರೂ ಸಹ ಕೇಂದ್ರ ಸರ್ಕಾರ ಲಿಂಗ ಹಾಗೂ ಧರ್ಮ ಭೇದವಿಲ್ಲದ ಜೀವನಾಂಶವನ್ನು ಎಲ್ಲ ನಾಗರಿಕರಿಗೆ ಕೊಡಲು ವಿಫಲವಾಗಿದೆ ಎಂದು ತಿಳಿಸಿದ್ದರು.

ಜೀವನ ನಿರ್ವಹಣೆಗೆ ಜೀವನಾಂಶ ಹಾಗೂ ಪರಿಹಾರವೊಂದೇ ಮೂಲ. ಹೀಗಾಗಿ ಜೀವನಾಂಶದಲ್ಲಿ ಧರ್ಮ, ಜಾತಿ, ಜನಾಂಗ, ಲಿಂಗ ಇಲ್ಲವೇ ಹುಟ್ಟಿನ ಸ್ಥಳದ ಆಧಾರದ ಮೇಲೆ ಭೇದ ಮಾಡುವುದು ಜೀವನದ ಹಕ್ಕು, ಸ್ವಾತಂತ್ರ್ಯ ಹಾಗೂ ಘನತೆಯ ಮೇಲೆ ನಡೆಸಲಾದ ದಾಳಿಯಂತೆ.

ಇದು ಸಂವಿಧಾನದ 21ನೇ ವಿಧಿಯ ಉಲ್ಲಂಘನೆ ಎಂದು ಉಪಾಧ್ಯಾಯ್ ಅರ್ಜಿ ಸಲ್ಲಿಸಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತು 73 ವರ್ಷಗಳಾದ ನಂತರವೂ ಹಾಗೂ ಭಾರತ ಸಾಮಾಜಿಕ ಸೆಕ್ಯುಲರ್ ಪ್ರಜಾಸತ್ತಾತ್ಮಕ ಗಣರಾಜ್ಯವಾದ ನಂತರವೂ ಜೀವನಾಂಶ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಕಾಯ್ದೆಗಳು ಸಂಕೀರ್ಣವಾಗಿವೆಯಷ್ಟೇ ಅಲ್ಲದೇ ಸಂವಿಧಾನದ ಸಮಾನತೆ ಹಾಗೂ ನ್ಯಾಯಕ್ಕೆ ವಿರುದ್ಧವಾಗಿವೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.


ಹಿಂದೂಗಳು, ಬೌದ್ಧರು, ಸಿಖ್ಖರು, ಜೈನರಿಗೆ ಹಿಂದೂ ವಿವಾಹ ಕಾಯ್ದೆ 1955 ಹಾಗೂ ಹಿಂದೂ ದತ್ತು ಹಾಗೂ ನಿರ್ವಹಣಾ ಕಾಯ್ದೆ 1956 ಅನ್ವಯವಾಗುತ್ತದೆ. ಮುಸ್ಲಿಮರಿಗೆ ಮುಸ್ಲಿಮ್ ಮಹಿಳಾ ಕಾಯ್ದೆ 1986 ಅನ್ವಯವಾಗುತ್ತದೆ.

ಕ್ರಿಶ್ಚಿಯನ್ನರಿಗೆ 1869ರ ಭಾರತೀಯ ವಿಚ್ಛೇದನ ಕಾಯ್ದೆ ಹಾಗೂ ಪಾರ್ಸಿಗಳಿಗೆ 1936ರ ಪಾರ್ಸಿ ಮದುವೆ ಹಾಗೂ ವಿಚ್ಛೇದನ ಕಾಯ್ದೆ ಅನ್ವಯವಾಗುತ್ತದೆ. ಆದರೆ, ಇವುಗಳಾವೂ ಲಿಂಗ ತಟಸ್ಥವಲ್ಲ ಎಂದು ಅರ್ಜಿದಾರರು ಹೇಳಿದ್ದಾರೆ.

# ಶೇ.21.52ರಷ್ಟು ಖೈದಿಗಳು ಅನಕ್ಷರಸ್ಥರು

ನವದೆಹಲಿ, ಫೆ. 14 – ದೇಶಾದ್ಯಂತ 4,78,600 ಖೈದಿಗಳಿದ್ದು, ಇವರಲ್ಲಿ 1,32,729 ಅನಕ್ಷರಸ್ಥರಾಗಿದ್ದಾರೆ. 5,677 ತಾಂತ್ರಿಕ ಪದವಿ ಇಲ್ಲವೇ ಡಿಪ್ಲೋಮಾ ಹೊಂದಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯದ ವರದಿಗಳು ತಿಳಿಸಿವೆ. ಗೃಹ ಖಾತೆ ಅಧೀನ ಸಚಿವ ಜಿ. ಕಿಶನ್ ರೆಡ್ಡಿ ಅವರು ಬಂಧೀಖಾನೆಗಳ ಕುರಿತ ಅಂಕಿ - ಅಂಶಗಳನ್ನು ಇತ್ತೀಚೆಗೆ ಸಂಸತ್ತಿನಲ್ಲಿ ಬಿಡುಗಡೆ ಮಾಡಿದ್ದಾರೆ. ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೋ (ಎನ್.ಸಿ.ಆರ್.ಬಿ.) ಡಿಸೆಂಬರ್ 31, 2019ರವರೆಗೆ ಮಾಹಿತಿ ಸಂಗ್ರಹಿಸಿ ದಾಖಲೆ ರೂಪಿಸಿದೆ.

ಹತ್ತನೇ ತರಗತಿಗಿಂತ ಕಡಿಮೆ ಶಿಕ್ಷಣ ಪಡೆದವರ ಸಂಖ್ಯೆ 1,98,872 (ಶೇ.41.55)ರಷ್ಟಾಗಿದೆ. 1,32,729 (ಶೇ.27.37)ರಷ್ಟು ಖೈದಿಗಳು ಅಶಿಕ್ಷಿತರು ಹಾಗೂ 1,03,036 (ಶೇ.21.52)ರಷ್ಟು ಖೈದಿಗಳು ಹತ್ತನೇ ತರಗತಿಯ ಆಚೆಗೆ ಹಾಗೂ ಪದವಿಗಿಂತ ಕಡಿಮೆ ಹಂತದವರೆಗೆ ಅಧ್ಯಯನ ಮಾಡಿದ್ದಾರೆ. 30201 (ಶೇ.6.31)ರಷ್ಟು ಖೈದಿಗಳು ಪದವೀಧರರು, 8,085 9ಶೇ.1.68)ರಷ್ಟು ಖೈದಿಗಳು ಸ್ನಾತಕೋತ್ತರ ಹಾಗೂ 5,677 (ಶೇ.1.18) ಖೈದಿಗಳು ತಾಂತ್ರಿಕ ಪದವಿ ಇಲ್ಲವೇ ಡಿಪ್ಲೋಮಾ ಪಡೆದಿದ್ದಾರೆ.




# ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ತನ್ನಿ

## ದೇವದಾಸಿ ಮಹಿಳೆಯರಿಗೆ ನ್ಯಾ. ಕೆಂಗಬಾಲಯ್ಯ ಕರೆ

ದಾವಣಗೆರೆ, ಫೆ.14- ಸಮಾಜದಲ್ಲಿರುವ ಅನಿಷ್ಟ ಪದ್ಧತಿ ಅಳಿಸಿ ಹಾಕುವ ಮೂಲಕ ಮಾನವ ಘನತೆ ಉಳಿಸಬೇಕಾಗಿದೆ. ದೇವದಾಸಿ ಪದ್ಧತಿ ಮುಕ್ತ ಸಮಾಜಕ್ಕೆ ನಾವೆಲ್ಲರೂ ಪಣ ತೊಡಬೇಕಾಗಿದೆ ಎಂದು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆಂಗಬಾಲಯ್ಯ ಕರೆ ನೀಡಿದರು.



ನಗರದ ರೋಟರಿ ಬಾಲಭವನದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ದೇವದಾಸಿ ಪುನರ್ವಸತಿ ಯೋಜನೆ ಆಶ್ರಯದಲ್ಲಿ ದೇವದಾಸಿ ಮಹಿಳೆಯರಿಗೆ ನಿನ್ನೆ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇವದಾಸಿ ಪದ್ಧತಿಗೆ ಒಳಗಾದ ಮಹಿಳೆಯರು ನರಕ ಅನುಭವಿಸುತ್ತಿದ್ದು, ಸಮಾಜ ಅವರನ್ನು ಪ್ರಾಣಿಗಳಂತೆ ಶೋಷಣೆ ಮಾಡುತ್ತಿರುವುದು ವಿಷಾದಕರ ಸಂಗತಿ. ದೇವದಾಸಿ ಪದ್ಧತಿ ನಿರ್ಮೂಲನೆ ಕಾಯ್ದೆ ಜಾರಿಯಲ್ಲಿದ್ದರೂ ಹಲವೆಡೆ ಮುತ್ತು ಕಟ್ಟುವ ಮೂಲಕ ದೇವದಾಸಿ ಪದ್ಧತಿಗೆ ಮಹಿಳೆಯರನ್ನು ನೂಕುತ್ತಿರುವುದು ಕಂಡು ಬರುತ್ತಿದೆ ಎಂದು ವಿಷಾದಿಸಿದರಲ್ಲದೇ, ದೇವದಾಸಿ ಪದ್ಧತಿಗೆ ಒಳಗಾಗಿರುವವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ತರಬೇಕಾಗಿದೆ ಎಂದು ಸಲಹೆ ನೀಡಿದರು.

ಅನಿಷ್ಟ ಪದ್ಧತಿಯಿಂದ ಶೋಷಣೆಗೆ ಒಳಗಾಗಿರುವ ತಾಯಿಂದಿರು ಎಲ್ಲಿಯೇ ಆಗಲಿ ದೇವದಾಸಿ ಪದ್ಧತಿಗೆ ನೂಕುವುದು ಕಂಡು ಬಂದರೆ ಅದನ್ನು ಸೂಕ್ತ ಇಲಾಖೆಗಳಿಗೆ ತಿಳಿಸಿ ತಡೆಯುವ ಕೆಲಸ ಮಾಡಬೇಕು. ದೇವದಾಸಿಯರ ಮರು ಸಮೀಕ್ಷೆ ನಡೆಸಿ ಅವರಿಗೆ ಪುನರ್ವಸತಿ, ಸೌಲಭ್ಯಗಳನ್ನು ನೀಡುವ ಜವಾಬ್ದಾರಿ ಸಮಾಜದ ಎಲ್ಲರ ಮೇಲಿದೆ ಎಂದು ತಿಳಿಸಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಎಚ್. ಅರುಣ್ ಕುಮಾರ್ ಮಾತನಾಡಿ, ದೇಶದಲ್ಲಿ ಇಂದಿಗೂ ಸಹ ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಮಲಹೊರುವ ಅನಿಷ್ಟ ಪದ್ಧತಿಗಳು ಜೀವಂತವಾಗಿರುವುದು ನಾಗರಿಕ ಸಮಾಜಕ್ಕೆ ಶೋಭೆಯಲ್ಲ. ದೇವದಾಸಿ ಮಹಿಳೆಯರಿಗೆ ವಸತಿ ಕಲ್ಪಿಸುವುದು, ಅವರಲ್ಲಿರುವ ಕೌಶಲ್ಯ ಅಭಿವೃದ್ಧಿಗೆ ನೆರವು ನೀಡುವುದು ಮಾಸಾಶನ ಹೆಚ್ಚಿಸಲು ಎಲ್ಲರ ಒತ್ತಾಯವಾಗಬೇಕು ಎಂದು ಹೇಳಿದರು.

ವಕೀಲರಾದ ಉಷಾ ಕೈಲಾಸದ್ ಮಾತನಾಡಿ, ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆ ಪುರುಷರಿಗೆ ಸಮಾನವಾಗಿ ತನ್ನ ಪ್ರತಿಭೆಯಿಂದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೂ ಶೋಷಣೆ ತಪ್ಪಿಲ್ಲ. ವಿದ್ಯಾವಂತ ಮಹಿಳೆಯರು ಶೋಷಣೆಗೆ ಒಳಗಾಗುತ್ತಿರುವುದು ದುರಂತದ ಸಂಗತಿ. ಮಹಿಳೆಯರು ಸಂಘಟಿತರಾಗುವ ಮೂಲಕ ತಮ್ಮ ಸಮಸ್ಯೆಗಳ ನಿವಾರಣೆಗೆ ಹಕ್ಕು ಪ್ರತಿಪಾದಿಸಬೇಕೆಂದರು.

ಜಿಲ್ಲಾ ದೇವದಾಸಿ ಪುನರ್ವಸತಿ ಯೋಜನಾ ಅನುಷ್ಠಾನಾಧಿಕಾರಿ ಪ್ರಜ್ಞಾ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮೋಕ್ಷಪತಿ ಅಧ್ಯಕ್ಷತೆ ವಹಿಸಿದ್ದರು. ವಕೀಲರಾದ ಎನ್.ಎಂ. ಆಂಜನೇಯ ಗೂರುಜಿ, ಸ್ಲಂ ಜನಾಂದೋಲನದ ರೇಣುಕಾ ಎಲ್ಲಮ್ಮ, ಯೋಜನಾ ಅನುಷ್ಠಾನಾಧಿಕಾರಿ ಉಮಾ ಓಂಕಾರ ಸೇರಿದಂತೆ ಇತರರಿದ್ದರು.

# ಪ್ರೇಮಿಗಳ ದಿನಾಚರಣೆಯ ಶುಭಾಶಯಗಳೊಂದಿಗೆ...

ಪ್ರೀತಿ-ಪ್ರೇಮ ಎನ್ನುವ ಪದವೇ ಒಂದು ರೀತಿಯ ಪುಳಕವನ್ನು ಹುಟ್ಟಿಸುವಂತಹದ್ದು. ಪ್ರೀತಿ ಕೇವಲ ಗಂಡು ಅಥವಾ ಹೆಣ್ಣಿಗೆ ಸಂಬಂಧಿಸಿದ್ದಲ್ಲ. ಇದು ಭೂಮಿಯ ಮೇಲಿರುವ ಪ್ರತಿಯೊಂದು ಜೀವಕ್ಕೂ ಅಗತ್ಯವಿರುವ ದಿವ್ಯ ಔಷಧ. ಹೆತ್ತ ವರು-ಮಕ್ಕಳು, ಗಂಡ-ಹೆಂಡತಿ, ಅಕ್ಕ-ತಂಗಿ, ಅಣ್ಣ-ತಮ್ಮ, ಸ್ನೇಹಿತ-ಸ್ನೇಹಿತೆಯರು ಹೀಗೆ ಹಲವಾರು ಮನಸುಗಳ ನಡುವೆ, ಸಂಬಂಧಗಳ ನಡುವೆ ನವಿರು ನವಿರಾದ ಭಾವನೆಗಳನ್ನು ಹುಟ್ಟು ಹಾಕುವುದೇ ಈ ಪ್ರೀತಿ.

ಭಗವಂತನಿಗೆ ನಿತ್ಯ ಒಂದು ಪುಷ್ಪವನ್ನು ಅರ್ಪಿಸುವುದು ಕೂಡ ಪ್ರೀತಿಯೇ. ಈ ಪ್ರೀತಿಯನ್ನು ನಮ್ಮ ಅಗತ್ಯಗಳಿಗನುಸಾರವಾಗಿ ಬಳಸಿಕೊಳ್ಳದೇ, ಜೀವನದ ಕೊನೆವರೆಗೂ ಕಾಪಿಟ್ಟುಕೊಂಡರೆ ಮಾತ್ರ ಅದರ ಪಾವಿತ್ರ್ಯತೆಯ ಅರಿವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಪ್ರೇಮ ನಿವೇದನೆಯ ವೇಗಕ್ಕಿಂತ ಬ್ರೇಕ್ ಅಪ್‌ಗಳ ವೇಗ ಹೆಚ್ಚಾಗಿದೆ. ಈಗಿನ ಯುವ ಪೀಳಿಗೆಯವರಲ್ಲಿ ಸಂಗಾತಿ ಹೀಗೇ ಇರಬೇಕು ಎನ್ನುವ ಹಪಾಹಪಿ ಹೆಚ್ಚಾಗಿರುವುದರಿಂದ ಒಂದು ಸಣ್ಣ ಕೊರತೆಯೂ ಬೃಹದಾಕಾರವಾಗಿ ಕಂಡು ಸಂಬಂಧಗಳು ಸಡಿಲಗೊಳ್ಳುತ್ತಿವೆ. ಪ್ರೀತಿ ಕಮರಿಹೋಗುತ್ತಿದೆ. ಹಣವೇ ಎಲ್ಲದಕ್ಕೂ ಮೂಲ ಮಂತ್ರ ಎನ್ನಬಹುದು. ಆದರೆ, ಪ್ರೀತಿಯ ವಿಷಯಕ್ಕೆ ಬಂದರೆ ಅದು ಸುಳ್ಳಾಗುತ್ತದೆ. ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ ಎನ್ನುವ ಮಾತು ಅಕ್ಷರಶಃ ಸತ್ಯ.

ಪ್ರೀತಿ ಇಲ್ಲದ ಮೇಲೆ ಹೂವು ಅರಳಲಾರದಾದರೆ ಇನ್ನೂ ಬದುಕು ಅರಳುವುದಾದರೂ ಹೇಗೆ? ಪ್ರೀತಿಯ ಮಹತ್ವ ಅರಿಯದವರು ಅತಾರ್ಕಿಕವಾಗಿ, ಅನಾಗರಿಕರಾಗಿ ವರ್ತಿಸುತ್ತಾರೆ. ಬದುಕು ತೀರಾ ಮೆಟೀರಿಯಲಿಸ್ಟಿಕ್ ಆಗುತ್ತಿದೆ. ಇವುಗಳಿಂದ ಹೊರಬರಬೇಕಾದರೆ, ಬದುಕು ಸಹನೀಯ ಗೊಳ್ಳಬೇಕಾದರೆ ಈ ಪ್ರೀತಿಯ ಪಾತ್ರ ಅತ್ಯಂತ ಪ್ರಮುಖವಾಗುತ್ತದೆ. ಕೇವಲ ಕಥೆ, ಕವನ, ಕಾದಂಬರಿ, ಭಾಷಣ, ಚಲನಚಿತ್ರಗಳಿಗಷ್ಟೇ ಮೀಸಲಾಗದೇ ಪ್ರೀತಿ



ಬದುಕಿನೆದೆಗೆ ಇಳಿದಾಗ ಮಾತ್ರ ಪರಿಪೂರ್ಣತೆ ಹೊಂದುತ್ತದೆ.

ಸಾಧನಕೇರಿಯ ಸಂತ ಬೇಂದ್ರೆಯವರು ತಮ್ಮ ಕವಿತೆಯಲ್ಲಿ ಪ್ರೇಮವನ್ನು ಅತ್ಯಂತ ಸೊಗಸಾಗಿ ಬರೆದಿದ್ದಾರೆ.

**'ನಾನು ಬಡವಿ ಆತ ಬಡವ**
**ಒಲವೇ ನಮ್ಮ ಬದುಕು**
**ಬಳಸಿಕೊಂಡೆವದನೆ ನಾವು**
**ಅದಕು ಇದಕು ಎದಕು'**

ಪ್ರೇಮವನ್ನು ಎಲ್ಲದಕ್ಕೂ ಬಳಸಿ, ಬದುಕನ್ನು ಹಸನುಗೊಳಿಸಿರುವ ಇಂತಹ ಮೇರು ಕವಿಗಳ ನಿದರ್ಶನ ಸಾಕಲ್ಲವೇ.

ಖ್ಯಾತ ಬರಹಗಾರ ಶೇಕ್ಸ್‌ಪಿಯರ್ ಹೇಳುವಂತೆ ಪ್ರೀತಿ ಅಂದರೆ, 'ದೇಹಗಳು ಬೆತ್ತಲಾಗುವುದಲ್ಲ, ಮನಸಿನ ಭಾವನೆಗಳು ಬೆತ್ತಲಾಗುವುದು.' ಎಷ್ಟು ಅರ್ಥಪೂರ್ಣ ನುಡಿಗಳಲ್ಲವೇ? ದೇಹಗಳು ಬೆತ್ತಲಾದರೆ ಅದು ಕಾಮ, ಮನಸು (ಭಾವನೆ)ಗಳು ಬೆತ್ತಲಾದರೆ ಅದು ಪ್ರೇಮ. ನಿಮ್ಮದು ಯಾವುದೆಂದು ನೀವೇ ನಿರ್ಧರಿಸಿ.

ಈ ಪ್ರೀತಿ ಒಂದು ರೀತಿಯ ದಾಸೋಹ ಪ್ರಕ್ರಿಯೆ. ನಿಮ್ಮಲ್ಲಿ ಸಾಕಷ್ಟು ಪ್ರೀತಿ ಇದೆ. ಅದನ್ನು ಹಂಚುತ್ತಾ ಹೋಗಿ. ಮಳೆಯಾಗಿ, ತೊರೆಯಾಗಿ, ನದಿಯಾಗಿ ಸದಾ ಹರಿಯುತ್ತಲೇ ಇರುತ್ತದೆ. ಕೊಡದೆಯೇ ಅಪೇಕ್ಷೆ, ಉಪೇಕ್ಷೆ, ನಿರೀಕ್ಷೆಗಳು ಅದೆಷ್ಟು ಸರಿ ಅಲ್ಲವೇ?

**'ಕೊಟ್ಟು ಪಡೆದರೇನೇ ಪ್ರೀತಿ**
**ಅದುವೇ ತಾನೇ ಜಗದ ನೀತಿ'**

ಇವು ನನ್ನದೇ ಕವಿತೆಯ ಸಾಲುಗಳು. ಇನ್ನೂ ಇತ್ತೀಚಿನ ದಿನಗಳಲ್ಲಿ ನಮ್ಮ ಪ್ರಣಯ ಪಕ್ಷಿಗಳು ಮನೆಯವರ ಒಪ್ಪಿಗೆ ಸಿಗದಿದ್ದಾಗ ತಕ್ಷಣ ಆತ್ಮಹತ್ಯೆಯ ಮೊರೆ ಹೋಗುತ್ತಾರೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದು ನನ್ನ ಪ್ರಶ್ನೆ ? ಪ್ರೀತಿ ನಮ್ಮ ಬದುಕಿನ ಒಂದು ಭಾಗವೇ ಹೊರತು, ಪ್ರೀತಿಯೇ ಬದುಕಲ್ಲ. ನಾವು ಬೇರೆ ಯವರನ್ನು ಪ್ರೀತಿಸುವ ಮುನ್ನ ನಮ್ಮ ಬದುಕನ್ನು ಪ್ರೀತಿಸಬೇಕು. ಆಗ ಮಾತ್ರ ಈ ಪ್ರೀತಿಯ ಬೆಲೆ ತಿಳಿಯುತ್ತದೆ. ಪ್ರೀತಿಸಿದವರಿಗಾಗಿ ಪ್ರಾಣ ಅಥವಾ ಈ ಬದುಕನ್ನೇ ನಾವು ಕಳೆದುಕೊಂಡರೆ ಸಾಧಿಸಿದ್ದಾದರೂ ಏನು? ಪಡೆದದ್ದಾದರೂ ಏನು? ಪ್ರೀತಿಗೆ ಕೊಲ್ಲುವುದಕ್ಕಿಂತ ಕಾಯುವ ಶಕ್ತಿ ಹೆಚ್ಚಿದೆ. ಅದನ್ನು ಸರಿಯಾದ ರೀತಿಯಲ್ಲಿ ಅರಿತುಕೊಳ್ಳದೇ ಪ್ರೀತಿಸಿದವರು ಸಿಗಲಿಲ್ಲ ಎನ್ನುವ ಸಣ್ಣ ಕಾರಣಕ್ಕೆ ನಾವು ಆತ್ಮಹತ್ಯೆ ಮಾಡಿಕೊಂಡರೆ ಜೀವದ ಬೆಲೆಯೇ ತಿಳಿಯದ ನಮಗೆ ಇನ್ನೂ ಪ್ರೀತಿಯ ಬೆಲೆ ಅರ್ಥವಾಗುವುದಾದರೂ ಹೇಗೆ ? ಮೊದಲು ನಾವು ನಮ್ಮನ್ನು, ನಮ್ಮ ಬದುಕನ್ನು ಪ್ರೀತಿಸಿದರೆ, ಕಳೆದುಕೊಳ್ಳುವ ಪ್ರಮೇಯವೇ ಬರಲಾರದು ಎನ್ನುವುದು ನನ್ನ ಅಭಿಪ್ರಾಯ. ಪ್ರೀತಿಯನ್ನು ಪ್ರೀತಿಯಿಂದ ಪ್ರೀತಿಸಿ ಪಡೆದುಕೊಳ್ಳಿ, ಕಳೆದುಕೊಳ್ಳಬೇಡಿ ಇದು ನನ್ನ ಕಳಕಳಿಯ ಮನವಿ.

**- ಶ್ರೀಮತಿ ಸುನಿತಾ ಪ್ರಕಾಶ್,** ದಾವಣಗೆರೆ

## ಪ್ರೀತಿ ವಾತ್ಸಲ್ಯ

ಪ್ರೀತಿಯೆಂದರೆ ಬೇರೆ ಅರ್ಥವೇತಕೆ ಬೇಕು
ಪ್ರೀತಿ ಪಾವಿತ್ರ್ಯತೆಯ ಅರಿತರೆ ಸಾಕು
ಪ್ರೀತಿಯಿಂದಲೆ ಜಗದಿ ಒಳ್ಳೆ ಬಾಂಧವ್ಯ
ಪ್ರೀತಿಯ ಮುಂದಿಲ್ಲ ಬೇರೆ ಐಶ್ವರ್ಯ.

ಪ್ರೀತಿಯೆಂದರೆ ಬರಿಯ ಪ್ರೇಮವಲ್ಲ
ಪ್ರೀತಿಯ ರೀತಿಯನು ಬಲ್ಲವನೇ ಬಲ್ಲ
ಬರಿ ಆಕರ್ಷಣೆಯೊಂದೇ ಪ್ರೀತಿಯಲ್ಲ
ಮನಸು ಕೆಡಿಸುವ ಪ್ರೀತಿ ನಮಗೆ ಬೇಕಿಲ್ಲ.

ತಾಯ್ತಂದೆ ಮಕ್ಕಳ ಮಧುರ ಬಾಂಧವ್ಯ
ಗಂಡ ಹೆಂಡತಿಯರ ಸರಸ ದಾಂಪತ್ಯ
ಗುರು ಶಿಷ್ಯರ ನಡುವೆ ಸುಜ್ಞಾನದ ಬಂಧ
ಜಗದ ಜನ ಇದನರಿತು ನಡೆದರೆ ಚೆಂದ.

ದೇವಾನುದೇವತೆಗಳ ಕಾಲದಲಿ ಪ್ರೀತಿ
ಇರಲಿಲ್ಲ ಅಂದು ಈಗಿನ ರೀತಿ
ಅವರ ಪ್ರೀತಿಯಲಿ ಅನುರಾಗವಿತ್ತು
ಸುಮಧುರ ಭಾವನೆಗೆ ಅಲ್ಲಿ ಬೆಲೆಯಿತ್ತು.

ಪ್ರೀತಿ ಪ್ರೇಮಗಳೆರಡು ಜೋಡು ನುಡಿಯಂತೆ
ಇದರ ಜೊತೆ ವಾತ್ಸಲ್ಯ ಸಿಹಿ ಜೇನಿನಂತೆ
ಪ್ರೀತಿ ವಾತ್ಸಲ್ಯವನು ಎಲ್ಲರಿಗೂ ನೀಡಿ
ನಗು ನಗುತ ಬಾಳೋಣ ಎಂದೆಲ್ಲ ಹಾಡಿ.

'ಪ್ರೇಮಿಗಳ ದಿನ' ವೆಂದು ಕರೆಯಲೇತಕೆ ಬೇಕು
'ಪ್ರೀತಿ ವಾತ್ಸಲ್ಯ'ದ ದಿನವೆಂದರೆ ಸಾಕು
ಈ ದಿನಕೆ ಜನರೆಲ್ಲ ಹಚ್ಚುವರು ಬಣ್ಣ
ಪರಿಶುದ್ಧ ಪ್ರೇಮವನು ತೋರಿ ನಡೆಯಣ್ಣ.

**- ಜಿ.ಎಸ್. ಗಾಯತ್ರಿ,** ಶಿಕ್ಷಕಿ
ಬಾಪೂಜಿ ಶಾಲೆ, ಹರಿಹರ.

# ಕನಿಷ್ಠ ಬೆಂಬಲ ಬೆಲೆ ಕಾಯ್ದೆ ತನ್ನಿ



**(1ನೇ ಪುಟದಿಂದ)** ಸಂಗ್ರಹಣೆಗೆ ಅವಕಾಶ ಒದಗಿಸಿ ಕಂಪನಿ ಮಾಲೀಕರ ಏಜೆಂಟ್‌ಗಳು ರೈತರೋ ಅಥವಾ ಸರ್ಕಾರವೇ? ಎಂದು ಪ್ರಶ್ನಿಸಿದರು.

ವಿದ್ಯುತ್ ಕಾಯ್ದೆ ಜಾರಿಗೊಳಿಸಿ ರೈತರ ಪಂಪ್ ಸೆಟ್‌ಗಳಿಗೆ ಡಿಜಿಟಲ್ ಮೀಟರ್ ಅಳವಡಿಕೆಯಿಂದ ಪ್ರೀಪೇಡ್ ಕರೆನ್ಸಿ ತರಹ ಬಿಲ್ ಪಾವತಿಸಿ ವಿದ್ಯುತ್ ಪಡೆಯಬೇಕು ಎಂಬ ಖಾಸಗೀಕರಣದ ಹುನ್ನಾರ ಕೈಬಿಡಬೇಕು. ಹಿಂದಿನಂತೆ ರೈತರಿಗೆ ಉಚಿತ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿದರು.

ಕಳೆದ 80 ದಿನಗಳಿಂದ ರೈತ ವಿರೋಧಿ ಕಾಯ್ದೆಗಳನ್ನು ಹಿಂಪಡೆಯಲು ನಡೆಯುತ್ತಿರುವ ಹೋರಾಟಕ್ಕೆ ಬೆಂಬಲಿಸಿ, ರಾಜ್ಯದಲ್ಲೂ ಚಳುವಳಿ ತೀವ್ರಗೊಳಿಸಲು ಪೂರ್ವಭಾವಿಯಾಗಿ ಫೆ.19 ರಂದು ದಾವಣಗೆರೆ ಎಪಿಎಂಸಿ ಆವರಣದಲ್ಲಿ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದ್ದು, ವಿಚಾರ ಸಂಕಿರಣದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿ ಸದಸ್ಯ ಡಾ. ಸಿದ್ದನಗೌಡ ಪಾಟೀಲ್, ಹಿರಿಯ ಪತ್ರಕರ್ತ ಶಿವಸುಂದರ್ ಅವರು ಭಾಗ ವಹಿಸಲಿದ್ದಾರೆ. ತಾಲ್ಲೂಕಿನಿಂದ ಹೆಚ್ಚಿನ ರೈತರು ಪಾಲ್ಗೊಳ್ಳಬೇಕು ಹಾಗೂ ಫೆ.20 ರ ನಂತರ ದೆಹಲಿಗೆ ರೈಲು ಭರೋ ಹೋರಾಟಕ್ಕೆ ಕೈಜೋಡಿಸಿ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಚಿರಂಜೀವಿ ಸಿ.ಎಂ ಹೊಳೆ, ಸತೀಶ್ ಗೌಡಗೊಂಡನಹಳ್ಳಿ, ಶರಣಪ್ಪ, ನಿಂಗಪ್ಪ, ಲೋಕೇಶ್, ನಾಗರಾಜ್, ರಾಜನಹಟ್ಟಿ ರಾಜು ಸೇರಿದಂತೆ ಮತ್ತಿತರರಿದ್ದರು.

## ನಗರದಲ್ಲಿ ಇಂದು ಕೆಡಿಪಿ ಸಭೆ

ದಾವಣಗೆರೆ ತಾಲ್ಲೂಕು ಪಂಚಾಯ್ತಿಯ ಕೆಡಿಪಿ ಸಭೆಯು ಇಂದು ಬೆಳಿಗ್ಗೆ 11 ಗಂಟೆಗೆ ಮಮತ ಮಲ್ಲೇಶಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ. ದಾರುಕೇಶ್ ತಿಳಿಸಿದ್ದಾರೆ.

## ಟಾಯ್ಕಾಥಾನ್-2021 : ಜಿ.ಎಂ.ಐ.ಟಿ ಪ್ರಾಜೆಕ್ಟ್ ಆಯ್ಕೆ



ದಾವಣಗೆರೆ, ಫೆ. 14- ಭಾರತ ಸರ್ಕಾರದ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳು ಆಯೋಜಿಸಿರುವ ರಾಷ್ಟ್ರಮಟ್ಟದ ಟಾಯ್ಕಾಥಾನ್ – 2021 ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ನಗರದ ಜಿ.ಎಂ. ಐ.ಟಿ. ತಾಂತ್ರಿಕ ಮಹಾವಿದ್ಯಾಲಯದ ನಾಲ್ಕು ವಿದ್ಯಾರ್ಥಿಗಳ ತಂಡಗಳು ಮೊದಲನೇಯ ಸುತ್ತಿನಲ್ಲಿ ಆಯ್ಕೆಯಾಗಿರುತ್ತಾರೆ.

ಸಿರಿ ಆರ್ ಮತ್ತು ತಂಡ ಹಾಗೂ ಸಾಗರ್ ಪಾಟೀಲ್ ಮತ್ತು ತಂಡ ಸಹಾಯಕ ಪ್ರಾಧ್ಯಾಪಕಿಯಾದ ಅಕ್ಷತಾ ಚೌಹಾಣ್, ಅಕ್ಷಯ್ ಶೇಟ್ ಮತ್ತು ತಂಡ ಸಹಾಯಕ ಪ್ರಾಧ್ಯಾಪಕರಾದ ಡಾ. ಕೆ.ಜೆ. ಪವನ್, ವಿ. ಪ್ರಣವ್ ಮತ್ತು ತಂಡ ಸಹಾಯಕ ಪ್ರಾಧ್ಯಾಪಕ ಡಾ. ಜಿ.ಎಚ್. ಪೂಜಾರ್ ಇವರುಗಳ ಮಾರ್ಗದರ್ಶನದಲ್ಲಿ ಆಯ್ಕೆಯಾಗಿರುತ್ತಾರೆ.

## ಗಗನಕ್ಕೇರಿದ ಪೆಟ್ರೋಲ್ ಬೆಲೆ

**(1ನೇ ಪುಟದಿಂದ)** ಕೇಂದ್ರ ಸರ್ಕಾರ ಪೆಟ್ರೋಲ್ ಮೇಲೆ 32.9 ರೂ.ಗಳ ಅಬಕಾರಿ ಶುಲ್ಕ ಹಾಗೂ ಡೀಸೆಲ್ ಮೇಲೆ 31.80 ರೂ.ಗಳ ಅಬಕಾರಿ ಶುಲ್ಕ ವಿಧಿಸುತ್ತಿದೆ.

ಮಾರ್ಚ್ 2020ರ ನಂತರ ಪೆಟ್ರೋಲ್ ಬೆಲೆ 19.16 ರೂ.ಗಳಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಡೀಸೆಲ್ ಬೆಲೆ 16.7 ರೂ.ಗಳಷ್ಟು ಹೆಚ್ಚಾಗಿದೆ.

## ಅಧಿಕಾರಕ್ಕೆ ಬಂದರೆ ಸಿಎಎ ಇಲ್ಲ

**(1ನೇ ಪುಟದಿಂದ)** ರಾಜ್ಯ ಒಡೆಯುವ ಪ್ರಯತ್ನ ನಡೆಸಿವೆ ಎಂದು ಆರೋಪಿಸಿರುವ ಅವರು, ಅಸ್ಸಾಂ ಒಡೆದರೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅವರಿಗೆ ಯಾವುದೇ ಪರಿಣಾಮವಾಗುವುದಿಲ್ಲ. ಆದರೆ, ಅಸ್ಸಾಂ ಹಾಗೂ ಭಾರತದ ಇತರೆ ಭಾಗಗಳ ಮೇಲೆ ಪರಿಣಾಮವಾಗಲಿದೆ ಎಂದು ಹೇಳಿದ್ದಾರೆ.

# ಜನ್ಮಜಾತ ಶ್ರವಣ ದೋಷದಿಂದ ಮಗುವಿನಲ್ಲಿ ಭಾಷಾ ಸಂಪಾದನೆಯ ಆಜೀವ ಕೊರತೆ



ಶ್ರವಣ ನಷ್ಟ ಅಥವಾ ಕಿವಿ ಕೇಳಸದಿರುವಿಕೆ ಸಾಮಾನ್ಯವಾಗಿ ಜನ್ಮ ದೋಷವಾಗಿದ್ದು, ಇದು ಬೆಳೆಯುವ ಮಗುವಿನ ಮಾತು, ಭಾಷೆ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.

ಶ್ರವಣ ದೋಷವುಳ್ಳ ಶಿಶುಗಳನ್ನು ಕಂಡು ಹಿಡಿಯುವುದು ಸ್ಕ್ರೀನಿಂಗ್ ಉದ್ದೇಶವಾಗಿದೆ. ಇದರಿಂದ ಆರಂಭದಿಂದಲೇ ಬೆಂಬಲ ಮತ್ತು ಸಲಹೆಯನ್ನು ಪಡೆಯಬಹುದಾಗಿದೆ. ಪ್ರತಿ ಸಾವಿರದಲ್ಲಿ ಒಂದರಿಂದ ಮೂರು ಶಿಶುಗಳು ಒಂದು ಅಥವಾ ಎರಡೂ ಕಿವಿಗಳ ಶಾಶ್ವತ ಶ್ರವಣ ನಷ್ಟದೊಂದಿಗೆ ಜನಿಸಿರುತ್ತವೆ. ಇದು ತೀವ್ರ ನಿಗಾ ಘಟಕಗಳಲ್ಲಿ 48 ಗಂಟೆಗಳಿಗಿಂತ ಹೆಚ್ಚು ಕಾಲ ಇರಿಸಿದಾಗ ಪರೀಕ್ಷೆಯ 100 ಶಿಶುಗಳಲ್ಲಿ 01 ಶಿಶುಗೆ ಹೆಚ್ಚಾಗುತ್ತದೆ.

ಈ ಶಿಶುಗಳಲ್ಲಿ ಹೆಚ್ಚಿನವರು ಶ್ರವಣ ನಷ್ಟದ ಇತಿಹಾಸವಿಲ್ಲದವರ ಕುಟುಂಬಗಳಲ್ಲಿ ಜನಿಸಿರುತ್ತಾರೆ. ಶಾಶ್ವತ ಶ್ರವಣ ನಷ್ಟವು ಮಗುವಿನ ಬೆಳವಣಿಗೆಯ ಮೇಲೆ ಗಮನಾರ್ಹವಾದ ಪರಿಣಾಮವನ್ನು ಬೀರುತ್ತದೆ. ಜನ್ಮಜಾತ ಅಥವಾ ನಂತರ ಉಂಟಾದ ಶ್ರವಣ ನಷ್ಟವನ್ನು ಹೊಂದಿರುವ ಮಕ್ಕಳನ್ನು ಪತ್ತೆ ಹಚ್ಚುವಲ್ಲಿ ವಿಫಲವಾದರೆ, ಅದು ಶಿಶುವಿನ ಮಾತು ಹಾಗೂ ಮಾತನಾಡುವಿಕೆಯ ಭಾಷಾ ಸಂಪಾದನೆಯಲ್ಲಿ ಆಜೀವ ಕೊರತೆ, ಶೈಕ್ಷಣಿಕ ಹಿನ್ನಡೆ ಮತ್ತು ಸಾಮಾಜಿಕ ನಡವಳಿಕೆಯ ಸಮಸ್ಯೆಗಳು ಉಂಟಾಗುತ್ತದೆ. ಆರಂಭಿಕ ಶ್ರವಣ ದೋಷ ಪತ್ತೆ ಮತ್ತು ನಿರ್ವಹಣೆಯು ಮಗುವಿನ ಮಾತು ಮತ್ತು ಭಾಷೆಯ ಬೆಳವಣಿಗೆಯನ್ನು ಸುಧಾರಿಸುತ್ತದೆ ಹಾಗೂ ಬಾಧಿತ ಮಕ್ಕಳಲ್ಲಿ ಶೈಕ್ಷಣಿಕ ಪ್ರಗತಿಯನ್ನು ತರುತ್ತದೆ.

**1:3:6 ನಿಯಮ**

ಹೊಸದಾಗಿ ಹುಟ್ಟಿದ ಅಂದರೆ ನವಜಾತ ಶಿಶುಗಳೆಲ್ಲ ಒಂದು ತಿಂಗಳ ಅವಧಿ ತಲುಪುವ ಮೊದಲು ಅವುಗಳನ್ನು ಶ್ರವಣ ತಪಾಸಣೆಗೆ ಒಳಪಡಿಸಬೇಕು.

ಶಿಶುವಿನ ಮೂರು ತಿಂಗಳ ಅವಧಿಯವರೆಗೆ ಸ್ಕ್ರೀನಿಂಗ್ ಪರೀಕ್ಷೆಯಲ್ಲಿ ವಿಫಲವಾದ ಎಲ್ಲಾ ಶಿಶುಗಳ ಆಡಿಯೋಲಾಜಿಕಲ್ (ಶ್ರವಣ ಪರೀಕ್ಷೆ) ಮೌಲ್ಯ ಮಾಪನ ಮಾಡಿಸಬೇಕು ಮತ್ತು 06 ತಿಂಗಳ ವಯಸ್ಸಿನೊಳಗೆ ಶ್ರವಣ ದೋಷವುಳ್ಳ ಶಿಶುಗಳಿಗೆ ಸೂಕ್ತ ನಿರ್ವಹಣೆಯನ್ನು ಪ್ರಾರಂಭಿಸಬೇಕು. ಶಿಶುವಿನ ಮೊದಲ ಆರು ತಿಂಗಳ ಅವಧಿಯು ಶ್ರವಣ ನಷ್ಟವನ್ನು ಗುರುತಿಸುವ ಮತ್ತು ಪರಿಹರಿಸುವ ನಿರ್ಣಾಯಕ ಅವಧಿಯಾಗಿದೆ.

ಶಿಶುವಿನ ಜನನದ ಸಮಯದಲ್ಲಿ ಸೂಕ್ತವಾದ ಚಿಕಿತ್ಸೆಯನ್ನು ನೀಡಿದರೆ ಮೂರು ವರ್ಷದ ಮಗುವಿನ ಶಬ್ದಕೋಶ 300-700 ಪದಗಳು, ಆರು ತಿಂಗಳ ವಯಸ್ಸಿನಲ್ಲಿ ಇದು 150-300 ಪದಗಳು, ಎರಡು ವರ್ಷ ವಯಸ್ಸಿನಲ್ಲಿ 0-50 ಪದಗಳು. ಅದನ್ನು ಹೋಲಿಸಿದರೆ ಮೂರು ವರ್ಷದ ಶ್ರವಣ ದೋಷವಿಲ್ಲದ ಮಗುವಿನ ಶಬ್ದಕೋಶ 500-900 ಪದಗಳು ಆಗಿರುತ್ತದೆ.

♦ ಡಿಸ್ಚಾರ್ಜ್ ಮಾಡುವ ಮೊದಲು ಬಾಪೂಜಿ ಆಸ್ಪತ್ರೆಯಲ್ಲಿ ಜನಿಸಿದ ಎಲ್ಲಾ ನವಜಾತ ಶಿಶುಗಳಿಗೆ ಪರೀಕ್ಷೆಯನ್ನು ಮಾಡಲಾಗುವುದು.

♦ ಇತರೆಡೆ ಜನಿಸಿದ ನವಜಾತ ಶಿಶುಗಳಿಗೂ ಸಹ ಶ್ರವಣ ಸ್ಕ್ರೀನಿಂಗ್ ಮಾಡಲಾಗುತ್ತದೆ.

♦ ಈ ಪರೀಕ್ಷೆಯಲ್ಲಿ AOEA (Automated OTO Acoustic Emission) ಎಂದು ಕರೆಯಲಾಗುತ್ತದೆ. ಪರೀಕ್ಷೆಯು 3-5 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ತರಬೇತಿ ಪಡೆದ ವ್ಯಕ್ತಿಯು ನವಜಾತ ಶಿಶುವಿನ ಕಿವಿಯಲ್ಲಿ ಮೈಕ್ರೋಫೋನ್ ಇಟ್ಟು ಮೃದುವಾದ ಶಬ್ದಗಳನ್ನು ನುಡಿಸುವ ಮೂಲಕ ಪರೀಕ್ಷಿಸುತ್ತಾರೆ. ಕಿವಿಯ ಒಳಗಿನ ಭಾಗವು ಧ್ವನಿಯನ್ನು ಪಡೆದಾಗ ಪ್ರತಿಕ್ರಿಯಿಸುತ್ತದೆ. ಇದನ್ನು ಸ್ಕ್ರೀನಿಂಗ್ ಸಾಧನಗಳಿಂದ ನಿರ್ಣಯಿಸಲಾಗುವುದು.

♦ ಈ ಪರೀಕ್ಷೆಯಿಂದ ಯಾವುದೇ ಅಪಾಯಗಳಿಲ್ಲ. ಎಲ್ಲಾ ನವಜಾತ ಶಿಶುಗಳಿಗೆ ಸ್ಕ್ರೀನಿಂಗ್ ಪರೀಕ್ಷೆಯನ್ನು ಶಿಫಾರಸ್ಸು ಮಾಡಲಾಗುವುದು. ಆರಂಭಿಕ ಹಂತದಲ್ಲಿಯೇ ಮಗುವಿನ ಶ್ರವಣ ನಷ್ಟವನ್ನು ಕಂಡುಹಿಡಿಯುವುದು ಮುಖ್ಯವಾಗಿದೆ. ಶ್ರವಣ ಪರೀಕ್ಷೆ ಮುಗಿದ ತಕ್ಷಣವೇ ಫಲಿತಾಂಶಗಳನ್ನು ನೀಡಲಾಗುವುದು.

♦ ಮೊದಲನೆಯ ಪರೀಕ್ಷೆಯಿಂದ ಸ್ಪಷ್ಟವಾದ ಪ್ರತಿಕ್ರಿಯೆ ಗಳನ್ನು ಪಡೆಯಲು ಯಾವಾಗಲೂ ಸಾಧ್ಯವಿಲ್ಲ, ಇದರರ್ಥ ಮಗುವಿಗೆ ಶ್ರವಣ ನಷ್ಟವಿದೆ ಎಂದಲ್ಲ. ಅದು ಈ ಕೆಳಗಿನ ಕಾರಣಗಳಿಂದ ಇರಬಹುದು.

* ಪರೀಕ್ಷೆ ಮಾಡಿದಾಗ ಮಗು ಅಸಮಾಧಾನ ಹೊಂದಿರಬಹುದು.

* ಯಾವುದಾದರೂ ಹಿನ್ನೆಲೆಯ ಶಬ್ದ ಕಾರಣವಿರಬಹುದು.

* ಮಗುವಿನ ಕಿವಿಯಲ್ಲಿ ದ್ರವ ಅಥವಾ ತಾತ್ಕಾಲಿಕ ತಡೆ ಇದ್ದಿರಬಹುದು. ಇದು ತುಂಬಾ ಸಾಮಾನ್ಯವಾಗಿದ್ದು ಅನಂತರ ಸರಿಹೋಗುತ್ತದೆ.

* ಮಗುವಿಗೆ ಶ್ರವಣ ನಷ್ಟವಿರಬಹುದು.

♦ ಇಂತಹ ಸಂದರ್ಭಗಳಲ್ಲಿ ಮಗುವಿಗೆ ಹಿಂದಿನ ಪರೀಕ್ಷೆ ಯಂತೆಯೇ ಮತ್ತೊಂದು ಪರೀಕ್ಷೆಯನ್ನು ಮಾಡಲಾಗುತ್ತದೆ. ಎರಡನೆಯ ಸ್ಕ್ರೀನಿಂಗ್ ಪರೀಕ್ಷೆಯು ಮಗುವಿನ ಒಂದು ಅಥವಾ ಎರಡೂ ಕಿವಿಗಳಿಂದ ಸ್ಪಷ್ಟ ಪ್ರತಿಕ್ರಿಯೆ ದೊರೆಯದಿದ್ದರೆ, ಇಂತಹ ಶಿಶುಗಳನ್ನು ಹೆಚ್ಚಿನ ವಿಶ್ಲೇಷಣೆ ಮತ್ತು ಚಿಕಿತ್ಸೆಗಾಗಿ ಶ್ರವಣ ತಜ್ಞರಿಗೆ ಸೂಚಿಸಲಾಗುತ್ತದೆ.

**- ಡಾ. ಮೂಗನಗೌಡ ಪಾಟೀಲ್**
ಪ್ರೊಫೆಸರ್ ಮತ್ತು ವಿಭಾಗದ ಮುಖ್ಯಸ್ಥರು
ಮಕ್ಕಳ ವಿಭಾಗ
ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು
ಸಂಶೋಧನಾ ಕೇಂದ್ರ, ದಾವಣಗೆರೆ

## 24 ರಂದು ಮೇಯರ್ ಚುನಾವಣೆ

ದಾವಣಗೆರೆ, ಫೆ.4- ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಇದೇ ದಿನಾಂಕ 24 ರಂದು ಬೆಳಿಗ್ಗೆ 11 ಗಂಟೆಗೆ ಮಹಾನಗರಪಾಲಿಕೆಯ ಸಭಾಂಗಣದಲ್ಲಿ ಪಾಲಿಕೆಯ ಮೇಯರ್, ಉಪಮೇಯರ್ ಮತ್ತು ನಾಲ್ಕು ಸ್ಥಾಯಿ ಸಮಿತಿಗಳ ಸದಸ್ಯರ ಸ್ಥಾನಗಳಿಗೆ ಚುನಾವಣೆ ನಡೆಸಲು ಚುನಾವಣಾ ಸಭೆಯನ್ನು ಏರ್ಪಡಿಸಲಾಗಿದೆ.


**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಪಕ್ಕ ವಿನಾಯಕ ಬಡಾವಣೆಯಲ್ಲಿ 80x60 ಪೂರ್ವ, ಬಸವೇಶ್ವರ ಬಡಾವಣೆಯಲ್ಲಿ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
60x40 ಪೂರ್ವ ಮನೆ ನಿಜಲಿಂಗಪ್ಪ ಬಡಾವಣೆ, ಚಿಗಟೇರಿ ಬಡಾವಣೆ 30x40 ಪೂರ್ವ, ಮೇಲೆ, ಕೆಳಗೆ ಬಸವೇಶ್ವರ ಬಡಾವಣೆ 30x40 ಪೂರ್ವ ಕೆಳಗೆ ಮತ್ತು ಮೇಲೆ ಮನೆ, ವಿನಾಯಕ ಬಡಾವಣೆ (ವಿದ್ಯಾನಗರ) 30x40 ಪಶ್ಚಿಮ, 44x60 ಎಂಸಿಸಿ 'ಎ' ಬ್ಲಾಕ್, ಮೇಲೆ-ಕೆಳಗೆ, ಪಶ್ಚಿಮ ಮನೆ.
ಮನೆ, ಸೈಟ್ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಮನೆಗಳು ಮಾರಾಟಕ್ಕಿವೆ**
1) 40x60 North, 3 ಬೆಡ್ ರೂಂ ಕುವೆಂಪು ಬಡಾವಣೆಯಲ್ಲಿ. 2) 30x40 South ಡಿ.ಸಿ.ಎಂ. ಲೇಔಟ್‌ನಲ್ಲಿ. 3) 30x50 west ಹೈಟೆಕ್ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬಾಡಿಗೆಗೆ ಇದೆ**
ಪಿ.ಜೆ.ಬಡಾವಣೆ 8ನೇ ಮುಖ್ಯ ರಸ್ತೆ, 8ನೇ ಕ್ರಾಸ್ ಡಾ. ಸಿದ್ದೇಶ್ ಬಿಲ್ಡಿಂಗ್‌ನಲ್ಲಿ 3 ಸಾವಿರ ಚದುರಡಿ ಮೊದಲನೇ ಮಹಡಿ ಆಫೀಸ್, ಕ್ಲಿನಿಕ್, ಫಾರ್ಮ, ಬ್ಯಾಂಕುಗಳಿಗೆ ಬಾಡಿಗೆಗೆ ಇದೆ. ವಿಚಾರಿಸಿ.
ಮೊ. 94480-28103

**ಬೇಕಾಗಿದ್ದಾರೆ**
ನಗರದ ಕ್ಲಿನಿಕ್‌ನಲ್ಲಿ ಕೆಲಸ ಮಾಡಲು ಮಹಿಳಾ ನರ್ಸ್ ಮತ್ತು ಮೆಡಿಕಲ್ ಷಾಪ್ ನಲ್ಲಿ ಕೆಲಸ ಮಾಡಲು ನುರಿತ, ಅನುಭವ ಇರುವ ಪುರುಷ ಅಥವಾ ಮಹಿಳೆ ಬೇಕಾಗಿದ್ದಾರೆ.
91646 26487

**ನವೋದಯ ಹಾಸ್ಟೆಲ್**
ಸೂರ್ಯ ನವೋದಯ ಕೋಚಿಂಗ್ ಸೆಂಟರ್‌ನಿಂದ ಇದೇ ಭಾನುವಾರ ತಾ 14.02.2021 ರಿಂದ 2 ತಿಂಗಳ ಕಾಲ ನವೋದಯ ಪರೀಕ್ಷೆ ತೆಗೆದುಕೊಂಡ ಮಕ್ಕಳಿಗೆ ಹಾಸ್ಟೆಲ್ ಸಹಿತ ತರಬೇತಿ ಶಿಬಿರ.
ಶ್ರೀ ಸುರೇಶ್ ಪಿ. ಮುರಗಿ, M.Sc., B.Ed., ಹೊಂಗಿರಣ, ಭಗೀರಥ ಸರ್ಕಲ್ ಹತ್ತಿರ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
99028 24909

|| ಸಾಯಿರಾಂ ||
**ಆರಿ ಬ್ಲೌಸ್ ಎಂಬ್ರಾಯಿಡರಿ ಮತ್ತು ಕ್ರೋಷ ಕುಚ್ಚು ಕಟ್ಟುವ ತರಬೇತಿ ನೀಡಲಾಗುತ್ತದೆ.**
ಸುಮುಖ್ ಕ್ರಿಯೇಷನ್ಸ್
97432 10163
70198 77346

**ಮನೆಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ 30x46 ಪೂರ್ವ, 30x40 ದಕ್ಷಿಣ ಮೇಲೆ ಕೆಳಗೆ ಮನೆ 60x40 ಬಸವೇಶ್ವರ ಬಡಾವಣೆ ಪಶ್ಚಿಮ, 30x40 ಡೂಪ್ಲೆಕ್ಸ್ 60x40 ಪೂರ್ವ ಕುವೆಂಪು ಬಡಾವಣೆ
ಮನೆ, ಸೈಟ್ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ**
ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಆಗಿರುವ ಹುಡುಗರು ಕಲೆಕ್ಷನ್ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಅಕೌಂಟೆಂಟ್ ಹುದ್ದೆಗೆ ಬಿ.ಕಾಂ. ಆಗಿರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಸಕ್ತರು ಬಯೋಡೇಟಾ ಮತ್ತು ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ನವೋದಯ್ ಚಿಟ್ ಫಂಡ್ಸ್
C/o ಬಾಲಾಜಿ ಗೋಲ್ಡ್ ಪ್ಯಾಲೇಸ್
ಮಂಡಿಪೇಟೆ, ದಾವಣಗೆರೆ.

**ಬೇಕಾಗಿದ್ದಾರೆ**
ತಿಂಗಳ ಸಂಬಳ 6000 ಮೇರೆಗೆ Swift Dzire ಕಾರ್‌ಗೆ 5 ವರ್ಷದ ಅನುಭವವುಳ್ಳ ಡ್ರೈವರ್ ಬೇಕಾಗಿದ್ದಾರೆ. All over Karnataka Business Tour (weekly 4 Days Duty) (3day Holiday) (time 6.am to 10 Pm) ಊಟ ಮತ್ತು ತಿಂಡಿ ಪ್ರತ್ಯೇಕ ಕೊಡಲಾಗುವುದು, ಯಾವುದೇ ಬ್ಯಾಟಾ ಇರುವುದಿಲ್ಲ.
86603 15890

**ಮನೆ ಲೀಜ್‌ಗೆ ಇದೆ**
ದಾವಣಗೆರೆ ಕುಂದುವಾಡ ರೋಡ್ ಜೈನ್ ಲೇಔಟ್‌ನಲ್ಲಿ 2ನೇ ಮೇನ್, 2ನೇ ಕ್ರಾಸ್‌ನಲ್ಲಿ 2ನೇ ಫ್ಲೋರ್‌ನಲ್ಲಿ, ಪೂರ್ವದಿಕ್ಕಿನ 2 ಬೆಡ್ ರೂಂ ಮನೆ ಲೀಜ್‌ಗೆ ಇದೆ. ಮುನ್ಸಿಪಲ್/ಬೋರ್ ನೀರಿನ ವ್ಯವಸ್ಥೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
9739204631, 89042 88094

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ.
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**WANTED**
1+Year experience in Digital Marketing Field. Attractive Salary.
Call: 9008985112

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ 18 ರಿಂದ 30 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**TUITIONS FOR**
1st to 9th, Diploma & BE., with Notes
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 88614 45913

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ, ವಾಜಪೇಯಿ ಲೇಔಟ್‌ನಲ್ಲಿ 30x40, 30x40 west ಅಕ್ಕ-ಪಕ್ಕ, 30x50 East, 30x50 west 60x50 East, 60x40 west
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130
99166 12110

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ ಲಕ್ಷ್ಮೀ ಫ್ಲೋರ್ ಮಿಲ್ ಹಿಂಭಾಗ, 2ನೇ ಕ್ರಾಸ್‌ನಲ್ಲಿರುವ ಮನೆ ಮೇಲೆ, ಸೋಲಾರ್, ಎಲೆಕ್ಟ್ರಿಕ್ ಹಾಗೂ ಬೋರ್‌ವೆಲ್ ವ್ಯವಸ್ಥೆ ಇರುವ ಸುಸಜ್ಜಿತ, 2 BHK ಮನೆ ಮಾರುವುದಿದೆ, ಆಸಕ್ತರು ವಿಚಾರಿಸಿರಿ.
9448798340, 7720075744, 7769013130

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
ಅಮರಾವತಿ ಹಾಲಪ್ಪ
98454 84076

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಪಕ್ಕದಲ್ಲಿ (ಬಲ ಭಾಗ) 30x40 ದಕ್ಷಿಣ, 30x50 ಉತ್ತರ, 40x60 ಪೂರ್ವ(40 ಅಡಿ ರಸ್ತೆಗೆ), ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ನೌಕರರಿಗೆ ಆದ್ಯತೆ.
90198 88512, 99008 37087

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**Building for Rent**
on Mama's Joint on 1st Floor Prime Location is on Rent.
Contact :
98440-65638

**ಹುಡುಗರು ಬೇಕಾಗಿದ್ದಾರೆ**
ಪತ್ರಿಕೆ ಹಂಚಲು ಹುಡುಗರು ಬೇಕಾಗಿದ್ದಾರೆ.
84949 49909

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು ದಿ. 17-02-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಹಾಲ್/ಮಳಿಗೆ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ವೇರ್, ಏಜೆಂಟ್
ಮೊ.97315 12365

**SPACE AVAILABLE ON RENT**
1st & 2nd Floor - 1650 sqft, Ground Floor - 220 Sqft
Suitable for Corporate office, Stockist Distributors, Poly clinic, ext lift, Facility Available 171/4AB, "Shastry Bhavan" 3rd Main, P.J. Extn, Near Chetana Tower. Contact
98807 65683, 99450 35442

**ಬೇಕಾಗಿದ್ದಾರೆ**
ಜನತಾ ಖಾದಿ ಭಂಡಾರ ಅಶೋಕ ರೋಡ್, ಮಹಿಳಾ ಸಮಾಜ ಕಾಂಪ್ಲೆಕ್ಸ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
80732 90322

**REQUIRED**
Experienced Office Assistant Having Knowledge in Tally and GST Filing. Contact
99000 22030

**PSI (CIVIL)**
545 POSTS
ಹೊಸ ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಕೋಚಿಂಗ್ ಅಕಾಡೆಮಿ
63646 40296

**ತಕ್ಷಣ ಬೇಕಾಗಿದ್ದಾರೆ**
IMPULSE ಕಂಪನಿಗೆ 10th, PUC, Diploma & Degree ಆದ ಯುವಕರು AGE (18-24) Earn (8000-16000) PM 1photo Resume, Adhar xerox ನೊಂದಿಗೆ
81056 00262

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಬೇಕಾಗಿದ್ದಾರೆ**
ಬಿಲ್ ಹಾಕಲು ಅನುಭವ ಇರುವ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
95382 13335
94482 33212

**SBI-CSP**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account open) with ATM old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ # 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005
93436 22166

**WANTED**
Sales -1 candidate
Office work-1 candidate
THE MOBILE SHOP
AVK College Road, DVG.
Contact: 90608 83886

**SHOPS FOR RENT**
(with Wash Room Facility)
N.R. Road, Davanagere.
Contact
94483 69523

**ಓಂ ಶ್ರೀ ದುರ್ಗಾದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೀ ಎಂ.ಜಿ.ರಾವ್
ನುಡಿದಂತೆ ನಡೆಯುವುದು ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆ ಇದ್ದರೂ ಚಿಂತಿಸಬೇಡಿ, ಶ್ರೀ ದುರ್ಗಾದೇವಿ ಪೂಜಾ ಅನುಗ್ರಹದಿಂದ ಪರಿಹಾರ ಶತಸಿದ್ಧ. ಇಂದೇ ಭೇಟಿ ನೀಡಿ.
ಮನೆ ವಿಳಾಸ : ಹದಡಿ ರಸ್ತೆ, ಮೋರ್ ಎದುರು, ದಾವಣಗೆರೆ.
ಮೊ: 98807 73186

ಶ್ರೀ ಸಿಗಂಧೂರೇಶ್ವರಿ
**ಶ್ರೀ ಸಿಗಂಧೂರು ಚೌಡೇಶ್ವರಿ ಜ್ಯೋತಿಷ್ಯ ಕೇಂದ್ರ**
ಪಂಡಿತ್ ಶ್ರೀ ಆರ್.ಎಂ.ಶಾಸ್ತ್ರೀ
ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುವರು. ವಿದ್ಯೆ, ಉದ್ಯೋಗ, ಪ್ರೇಮ ವಿಚಾರ, ಹಣಕಾಸಿನ ಸಮಸ್ಯೆ, ವ್ಯಾಪಾರ ಇನ್ನೂ ಗುಪ್ತ ಸಮಸ್ಯೆಗಳಿಗೆ ನಿಮ್ಮ ಜಾತಕ ನೋಡಿ ಶಾಶ್ವತ ಪರಿಹಾರ ಶತಸಿದ್ಧ.ಇಂದೇ ಭೇಟಿ ನೀಡಿ. ವಿಳಾಸ : ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
ಮೊ: 95914 26625

**ಡಾ|| ಆಲೂರು ಆಸ್ಪತ್ರೆ**
ಕಳೆದ ಒಂದು ವರ್ಷದಿಂದ 'ಕೋವಿಡ್-19' ಕಾರಣಕ್ಕಾಗಿ ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಆಸ್ಪತ್ರೆಯನ್ನು ಮುಚ್ಚಲಾಗಿತ್ತು. ಈಗ ಡಾ|| ಮಂಜುನಾಥ್ ಆಲೂರುರವರು ಪ್ರತಿದಿನ ಮಧ್ಯಾಹ್ನ 12.30 ರಿಂದ 3.30, ಸಂಜೆ 7.30 ರಿಂದ 8.30 ಹಾಗೂ ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 11 ರವರೆಗೆ ಲಭ್ಯವಿರುತ್ತಾರೆ. ಸಂಪರ್ಕಿಸಿ :
88677 75564

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day nutana collage road, Vidyanagara 2nd main, Davangere
77603 16576
90080 55813

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**Professional make up Artist Course**
one Month Intense Bridal make up Course. Registration are open (only for ladies) certified course more information call
70190 73324

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
1 ರಿಂದ 2 ವರ್ಷ ಅನುಭವವುಳ್ಳ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ ಜ್ಯೂನಿಯರ್ ಅಕೌಂಟೆಂಟ್ ಹುಡುಗ ಬೇಕಾಗಿದ್ದಾರೆ. ಸಂಪರ್ಕಿಸಿ:
ಆರಾಧ್ಯ ಕೆಮಿಕಲ್ಸ್ & ಫರ್ಟಿಲೈಜರ್
# 115/1, ಹಳೇ ಪಿ.ಬಿ. ರಸ್ತೆ, ನಂದಿ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆ.
ಫೋ. : 87228 55609

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ಕೊಕ್ಕನೂರಿನಲ್ಲಿ ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರ ಆತ್ಮಾರ್ಪಣಾ ದಿನಾಚರಣೆ



ಮಲೇಬೆನ್ನೂರು, ಫೆ.14- ಸಮೀಪದ ಕೊಕ್ಕನೂರು ಗ್ರಾಮದ ವಾಸವಿ ಯುವಜನ ಸಂಘ ಮತ್ತು ವಾಸವಿ ಮಹಿಳಾ ಸಂಘಗಳ ಆಶ್ರಯದಲ್ಲಿ ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರ ಆತ್ಮಾರ್ಪಣಾ ದಿನವನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಮುತ್ತೈದೆಯರು ಗಂಗಾಪೂಜೆ ನೆರವೇರಿಸಿ, ಮೆರವಣಿಗೆಯಲ್ಲಿ ಕಳಸ ತಂದು ಸಿಂಗರಿಸಿದ ಮಂಟಪದಲ್ಲಿ ಸ್ಥಾಪಿಸಲಾಯಿತು. ನಂತರ ಮಹಿಳೆಯರು, ಪುರುಷರು ಶ್ರೀ ಅಮ್ಮನವರ ಭಜನೆ, ಕೀರ್ತನೆ, ಗೀತೆಗಳನ್ನು ಹಾಡಿದರು. ವಾಸವಿ ಯುವಜನ ಸಂಘದ ಮತ್ತು ವಾಸವಿ ಮಹಿಳಾ ಸಂಘದ ಪದಾಧಿಕಾರಿಗಳು, ಆರ್ಯವೈಶ್ಯ ಸಮಾಜದ ಹಿರಿಯರು ಹಾಜರಿದ್ದರು.

## 'ತನಿಷ್ಕ' ಪ್ರಥಮ ವಾರ್ಷಿಕೋತ್ಸವ



ದಾವಣಗೆರೆ, ಫೆ.14- ನಗರದ 'ತನಿಷ್ಕ' ಬಂಗಾರದ ಅಂಗಡಿಯ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಅದೇ ವೇಳೆ ಬಂಗಾರ ಹಾಗೂ ವಜ್ರದ ಆಭರಣಗಳ ಜಾಗೃತಿ ಕಾರ್ಯಕ್ರಮ ಕೂಡ ನಡೆಯಿತು. ಈ ಸಂದರ್ಭದಲ್ಲಿ ಅಂಗಡಿಯ ಪಾಲುದಾರ ಕೆ.ಜೆ. ಅಫಾಕ್ ರಜ್ವಿ, ಮಾಲೀಕ ಕೆ.ಜೆ. ಅಬ್ರಾರ್, ಸಿಇಒ ಬೋಪಣ್ಣ, ಅರುಣ್ ದ್ವಾರಕನಾಥ್, ಡಾ. ಅಶ್ವಿನಿ, ಶೋಭಾ ಶಿವರಾಜ್, ಮಂಗಳ ರಾಜಶೇಖರ್ ಬೆನ್ನೂರು, ರೂಪ ಆವರಗೊಳ್ಳ ಮತ್ತಿತರರು ಉಪಸ್ಥಿತರಿದ್ದರು.

# ಬೆಣ್ಣೆನಗರಿಯಲ್ಲಿ 'ಪೊಗರು' ಆಡಿಯೋ ಅದ್ಧೂರಿ ಬಿಡುಗಡೆ

ದಾವಣಗೆರೆ, ಫೆ.15- ಆ್ಯಕ್ಷನ್ ಪ್ರಿನ್ಸ್ ಬಿರುದು ಪಡೆದ ನಟ ಧ್ರುವ ಸರ್ಜಾ ಅವರ ನಟನೆಯ ಬೆಳ್ಳಿ ತೆರೆ ಮೇಲೆ ಬಿಡುಗಡೆಗೊಳ್ಳಲಿರುವ 'ಪೊಗರು' ಸಿನಿಮಾದ ಆಡಿಯೋ ಬೆಣ್ಣೆನಗರಿಯಲ್ಲಿ ಅದ್ಧೂರಿಯಾಗಿ ಬಿಡುಗಡೆಯಾಯಿತು.

ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಇಂದು ಸಂಜೆ ಸಹಸ್ರಾರು ಅಭಿಮಾನಿಗಳು, ಸಿನಿ ಪ್ರೇಕ್ಷಕರಿಗೆ ಸಿನಿಮಾದ ಹಾಡುಗಳನ್ನು ಕೇಳಿಸಿ, ನೃತ್ಯದ ಮುಖೇನ ಮನರಂಜಿಸುವ ಮೂಲಕ ಆಡಿಯೋ ಬಿಡುಗಡೆಗೊಂಡಿತು.

**ಅತಿಥಿಗಳ ಶುಭ ಹಾರೈಕೆ:** ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ಅವರು ಮಾತನಾಡಿ, ಧ್ರುವ ಸರ್ಜಾ ಕನ್ನಡ ಚಿತ್ರರಂಗಕ್ಕೆ ಮತ್ತಷ್ಟು ಉತ್ತಮ ಚಿತ್ರ ನೀಡಲಿ ಎಂದು ಆಶಿಸಿದರು. ಇದೇ ವೇಳೆ ಬಿ.ಎ. ಬಸವರಾಜ್ ಅವರಿಗೆ ಬೆಳ್ಳಿ ಕಿರೀಟ ಹಾಕಿ ಸನ್ಮಾನಿಸಿ ಗೌರವಿಸಲಾಯಿತು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಚಿರಂಜೀವಿ ಸರ್ಜಾ ಅವರನ್ನು ಸ್ಮರಿಸಿದರು. ನಾನು ಸಂಸದನಾದ ನಂತರ ದಾವಣಗೆರೆಯಲ್ಲಿ ಮೂರನೇ ಬಾರಿ ಚಿತ್ರವೊಂದರ ಆಡಿಯೋ ಬಿಡುಗಡೆ ನಡೆಯುತ್ತಿದೆ. ದಾವಣಗೆರೆ ಜನರು ಪೊಗರು ಚಿತ್ರ ನೋಡುವ ಮೂಲಕ ಹರಸಬೇಕು. ಪೊಗರು ಚಿತ್ರದ ಹಾಡೊಂದನ್ನು ಇಡೀ ವಿಶ್ವದಾದ್ಯಂತ 20 ಕೋಟಿ ಜನರು ವೀಕ್ಷಿಸಿರುವುದು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ನಮ್ಮ ತಂದೆ ಜಿ. ಮಲ್ಲಿಕಾರ್ಜುನಪ್ಪನವರು 1969ರಲ್ಲಿ ಅರಿಶಿಣ ಕುಂಕುಮ ಚಿತ್ರ ನಿರ್ಮಿಸಿದ್ದಾಗ ನಾನು ಸಹ ಆ ಚಿತ್ರದಲ್ಲಿ ಬಣ್ಣ ಹಚ್ಚಿದ್ದೆ ಎಂದು ಮೆಲುಕು ಹಾಕಿದರು.

**ಪೊಗರು ಆಡಿಯೋ ರಿಲೀಸ್‌ಗೆ ಟಗರು:**



ಪೊಗರು ಸಿನಿಮಾ ಆಡಿಯೋ ರಿಲೀಸ್ ಕಾರ್ಯಕ್ರಮಕ್ಕೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಸಿನಿಮಾ ನಿರ್ದೇಶಕ ನಂದಕಿಶೋರ್ ಅವರ ತಂದೆ ಸುಧೀರ್ ಹೆಸರಾಂತ ಕಲಾವಿದರು. ಹಿರಿಯ ಕಲಾವಿದ ಶಕ್ತಿ ಪ್ರಸಾದ್ ಅವರ ಮಗ ಅರ್ಜುನ್ ಸರ್ಜಾ ಮತ್ತು ಮೊಮ್ಮಗ ಧ್ರುವ ಸರ್ಜಾ. ನಟನೆ ಎಂಬುದು ರಕ್ತಗತವಾಗುತ್ತಾ ಬಂದಿದೆ. ಕುಟುಂಬವೇ ಕಲಾ ಸೇವೆ ಮಾಡುತ್ತಿದೆ. ಧ್ರುವ ಸರ್ಜಾ ಅವರ ಮೂರು ಸಿನಿಮಾಗಳು ಯಶಸ್ವಿಯಾಗಿದ್ದು, ನಾಲ್ಕನೇ ಸಿನಿಮಾ ಪೊಗರು ಸಹ ಯಶಸ್ವಿ ಕಾಣಲಿದೆ. ಪ್ರೇಕ್ಷಕರು ಈ ಸಿನಿಮಾ ಮೆಚ್ಚಿ ಸ್ವಾಗತಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

**ವೇದಿಕೆಗೆ ರಾಘವೇಂದ್ರ ರಾಜ್ ಕುಮಾರ್:** ಪೊಗರು ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿರುವ ಹಿರಿಯ ನಟ ರಾಘವೇಂದ್ರ ರಾಜ್ ಕುಮಾರ್ ಸಹ ಆಡಿಯೋ ರಿಲೀಸ್ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪೊಗರು ಸಿನಿಮಾ ಹಾಡು ಕೈಲಾಸ, ಬ್ರಹ್ಮಾಂಡ, ವೈಕುಂಠ ಮೂರರ ಮಿಶ್ರಣದಂತಿದೆ ಎಂದು ಹೇಳಿದರು.

ಸಿನಿಮಾ ನಿರ್ದೇಶಕ ನಂದಕಿಶೋರ್ ಮಾತನಾಡಿದರು. ಪೊಗರು ಸಿನಿಮಾದಲ್ಲಿನ ತಾಯಿ ಕುರಿತಾದ ಲಿರಿಕಲ್ ವಿಡಿಯೋವನ್ನು ನಟ ಅರ್ಜುನ್ ಸರ್ಜಾ ಬಿಡುಗಡೆ ಮಾಡಿದರು. ಎಸ್ಪಿ ಹನುಮಂತರಾಯ ಭಾಗವಹಿಸಿದ್ದರು.

**ನೆನಪಿನ ಭಾವುಕ:** ಆರಂಭದಲ್ಲಿ ನಟ ಚಿರಂಜೀವಿ ಸರ್ಜಾ ಅವರ ಪರಿಚಯ ಮಾಡುವಾಗ ಪ್ರೇಕ್ಷಕರು ಮೂಕರಾದರು. ವೇದಿಕೆ ಬಳಿ ಕುಳಿತು ವೀಕ್ಷಿಸುತ್ತಿದ್ದ ಮಾವ ಅರ್ಜುನ್ ಸರ್ಜಾ ಅಳಿಯನ ನೆನಪು ಮಾಡಿಕೊಂಡು ಕಣ್ಣಂಚಲಿ ನೀರು ತುಂಬಿಕೊಂಡು ಭಾವುಕರಾದರು. ಧ್ರುವ ಸರ್ಜಾ ಅವರ ಪೊಗರು ಸಿನಿಮಾದ ಹಾಡುಗಳು, ನೃತ್ಯ ಹಾಗೂ ಅಭಿಮಾನಿಗಳ ಅಭಿಮಾನಕ್ಕೆ ಸಂತಸಗೊಂಡರು. ಪಕ್ಕದಲ್ಲೇ ಕುಳಿತಿದ್ದ ಧ್ರುವ ಸರ್ಜಾ ಸಹ ಅಣ್ಣನ ನೆನೆದರು. ಮಾವನೊಂದಿಗೆ ತಮ್ಮ ಸಿನಿಮಾದ ಆಡಿಯೋ ರಿಲೀಸ್ ಯಶಸ್ಸಿಗೆ ಹರುಷಗೊಂಡರು.

**ಕಿಕ್ಕಿರಿದ್ದು ಸೇರಿದ್ದ ಅಭಿಮಾನಿಗಳು-ಸಿನಿ ಪ್ರೇಕ್ಷಕರು:** ಪೊಗರು ಸಿನಿಮಾದ ಇಂಟ್ರಡಕ್ಷನ್ ಸಾಂಗ್ ಅನ್ನು ಎರಡು ಬಾರಿ ಹಾಕಲಾಯಿತು. ಸಿನಿಮಾದ ಡೈಲಾಗ್ ಟ್ರೈಲರ್ ಸಹ ಹಾಕಲಾಯಿತು. ಪೊಗರು, ಅದ್ದೂರಿ, ಬಹದ್ದೂರ್ ಸೇರಿದಂತೆ ಧ್ರುವ ಸರ್ಜಾ ಸಿನಿಮಾದ ಹಾಡುಗಳ ನೃತ್ಯ ನೆರೆದಿದ್ದ ಅಭಿಮಾನಿಗಳ ಮನತಣಿಸಿತು. ಸರ್ಜಾ ಪೊಗರು ಸಿನಿಮಾದ ಐ ಆಮ್ ನಟೋರಿಯಸ್ ಡೈಲಾಗ್ ಹೇಳಿ ಅಭಿಮಾನಿಗಳನ್ನು ರಂಜಿಸಿದರು. ಕೊನೆಯಲ್ಲಿ ಸಿನಿಮಾದ ಹಾಡಿಗೆ ನೃತ್ಯ ಮಾಡಿ, ನಂತರ ಪುನಃ ಡೈಲಾಗ್ ಹೇಳಿ ಮನರಂಜಿಸಿದರು. ಖರಾಬು ಹಾಡು ಸೇರಿದಂತೆ ಸಿನಿಮಾದ ಹಾಡು, ಡೈಲಾಗ್ ಗೆ ಅಭಿಮಾನಿಗಳು ಹುಚ್ಚೆದ್ದು ಕುಣಿದರು. ಅಭಿಮಾನಿಗಳು, ಸಿನಿ ಪ್ರೇಕ್ಷಕರ ದಂಡೇ ಹರಿದು ಬಂದಿತ್ತು. ನೆಚ್ಚಿನ ನಟನ ಕಣ್ತುಂಬಿಕೊಳ್ಳಲು, ಮೊಬೈಲ್ ನಲ್ಲಿ ಸೆರೆ ಹಿಡಿಯಲು ಪೊಲೀಸರ ಭಯವಿಲ್ಲದೇ ಹಾಕಿದ್ದ ಬ್ಯಾರಿಕೇಡ್‌ಗಳನ್ನು ದಾಟಿ ವೇದಿಕೆ ಬಳಿ ಬಂದು ಅಭಿಮಾನ ವ್ಯಕ್ತಪಡಿಸಿದರು.

**ಚಂದನ್ ಶೆಟ್ಟಿ ಹವಾ:** ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಹಾಡಿದ ಖರಾಬು ಬಾಸು ಕರಾಬು ಹಾಡಿಗೆ ಅಭಿಮಾನಿಗಳು ಮನಸೋತರು. ಈ ವೇಳೆ ಮಾತನಾಡಿದ ಚಂದನ್ ಶೆಟ್ಟಿ, ಸಂಗೀತ ನಿರ್ದೇಶಕರಾಗಿ ಪೊಗರು ಸಿನಿಮಾ ಮುಖೇನ ಎಂಟ್ರಿ. ಖರಾಬು ಬಾಸು ಖರಾಬು, ಅಣ್ಣನಿಗೆ ಪೊಗರು ಸೇರಿದಂತೆ 3 ಹಾಡುಗಳನ್ನು ತಯಾರು ಮಾಡಲು ಅವಕಾಶ ಸಿಕ್ಕಿದೆ. ಇದು ನನ್ನ ಸಂಗೀತ ಸೇವೆಗೆ ಸಿಕ್ಕ ದೊಡ್ಡ ವೇದಿಕೆ ಎಂದು ಚಂದನ್ ಶೆಟ್ಟಿ ಹರುಷ ವ್ಯಕ್ತಪಡಿಸಿದರು.

ನಿರ್ದೇಶಕ ನಂದಕಿಶೋರ್, ನಿರ್ಮಾಪಕ ಬಿ.ಕೆ. ಗಂಗಾಧರ್, ನೃತ್ಯ ನಿರ್ದೇಶಕ ಮುರಳಿ ಸೇರಿದಂತೆ ಸಿನಿಮಾ ತಂಡ ಸಹ ಖರಾಬು ಹಾಡಿಗೆ ನರ್ತಿಸಿದರು. ಪೊಗರು ಆಡಿಯೊ ಬಿಡುಗಡೆ ಕಾರ್ಯಕ್ರಮಕ್ಕೆ ನಿರೂಪಕಿ ಅನುಶ್ರೀ ಅವರು ತಮ್ಮ ನಿರೂಪಣೆಯಿಂದ ಪ್ರೇಕ್ಷಕರನ್ನು ಹುರಿದುಂಬಿಸಿದರು.

### ಕನ್ನಡ ಸಿನಿಮಾ ಅಭಿಮಾನಿಗಳಾಗಿ

ದಾವಣಗೆರೆ ಜನರ ಅಭಿಮಾನಕ್ಕೆ ಚಿರ ಋಣಿ. ಅದ್ದೂರಿ ಸಿನಿಮಾ ಸಂದರ್ಭದಲ್ಲೂ ನಗರಕ್ಕೆ ಬಂದಿದ್ದೆ. ನಿಮ್ಮ ಅಭಿಮಾನ ಹೀಗೆ ಇರಲಿ. ಕೇವಲ ಅವರಿವರ ಅಭಿಮಾನಿಗಳಾಗದೇ, ಕನ್ನಡ ಸಿನಿಮಾ ರಂಗದ ಅಭಿಮಾನಿಗಳಾಗಿ. ನನ್ನ ಸಿನಿಮಾಗಳನ್ನಷ್ಟೇ ಅಲ್ಲದೇ ಕನ್ನಡ ಸಿನಿಮಾಗಳನ್ನು ಪ್ರೀತಿಯಿಂದ ವೀಕ್ಷಿಸಿ ಹರಸಿ.

**- ಧ್ರುವ ಸರ್ಜಾ**

### ಪ್ರೇಕ್ಷಕರ ಅಭಿಮಾನವೇ ನಮಗೆ ಉಡುಗೊರೆ

ಪೊಗರು ಸಿನಿಮಾ ಉತ್ತಮ ಚಿತ್ರವಾಗಿದ್ದು, ಸಾಕಷ್ಟು ಶ್ರಮ ಪಟ್ಟಿದ್ದಾರೆ. ಕೇವಲ ಹಣ ಮಾಡುವುದೇ ಗುರಿಯಲ್ಲ. ಪ್ರೇಕ್ಷಕರಿಗೆ ಉತ್ತಮ ಸಿನಿಮಾ ನೀಡಬೇಕೆಂಬ ಜವಾಬ್ದಾರಿ ಇರುವ ಕಾರಣಕ್ಕೆ ಎರಡು ವರ್ಷಕ್ಕೆ ಉತ್ತಮ ಸಿನಿಮಾ ತಯಾರಿಸಲಾಗಿದೆ. ಕೊರೊನಾ ಕಾರಣ ಆಡಿಯೋ ಮತ್ತು ಸಿನಿಮಾ ಬಿಡುಗಡೆ ತಡವಾಗಿದೆ. ಧ್ರುವ ಸರ್ಜಾ ನನಗೆ ಮಗನಾಗಿದ್ದಾನೆ. ಪ್ರೇಕ್ಷಕರ ಅಭಿಮಾನವೇ ನಮಗೆ ಉಡುಗೊರೆ. ಅದನ್ನು ಉಳಿಸಿಕೊಳ್ಳುತ್ತಾನೆ. ಫೆ.19ಕ್ಕೆ ಬಿಡುಗಡೆಯಾಗಲಿರುವ ಸಿನಿಮಾ ವೀಕ್ಷಿಸಿ ಹಾರೈಸಿ. ಡಾ. ರಾಜ್ ಕುಮಾರ್, ವಿಷ್ಣುವರ್ಧನ್, ಅಂಬರೀಷ್, ಶಂಕರ್ ನಾಗ್, ದಿನೇಶ್, ಶಕ್ತಿ ಪ್ರಸಾದ್ ಸೇರಿದಂತೆ ಅನೇಕ ಹಿರಿಯ ನಟರು ಕನ್ನಡ ಸಿನಿಮಾ ರಂಗವನ್ನು ಹಾಗೂ ಕಲಾಸಕ್ತರನ್ನು ಬೆಳೆಸಿದ್ದಾರೆ. ಅವರುಗಳ ಆಶೀರ್ವಾದ ಪೊಗರು ಸಿನಿಮಾಗಷ್ಟೇ ಅಲ್ಲ ಎಲ್ಲಾ ಕನ್ನಡ ಸಿನಿಮಾಗಳ ಮೇಲಿದೆ.

**- ಅರ್ಜುನ್ ಸರ್ಜಾ**

# ಬಡ ಮಕ್ಕಳಿಗೆ ಆಸರೆಯಾಗಿದ್ದವರು ವೀರಭದ್ರಪ್ಪ ಎಂ. ಚಿಗಟೇರಿ

ದಾವಣಗೆರೆ, ಫೆ.14- ಶ್ರೀ ವೀರಭದ್ರಪ್ಪ ಎಂ. ಚಿಗಟೇರಿಯವರ 31 ನೇ ಸ್ಮರಣೋತ್ಸವ ಹಾಗೂ ಲಿಂ. ಶ್ರೀಮತಿ ವೀರಮ್ಮ, ಶಿವಪ್ಪ ಕುಬುಸದ ಸ್ಮಾರಕ ವಚನಗಾಯನ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮವು ಶ್ರೀ ವೀರಭದ್ರಪ್ಪ ಎಂ. ಚಿಗಟೇರಿ ವಿದ್ಯಾಭವನ (ಶ್ರೀ ಮುರುಘರಾಜೇಂದ್ರ ಪ್ರೌಢಶಾಲೆ) ಇಂದು ನಡೆಯಿತು.

ಅಧ್ಯಕ್ಷತೆಯನ್ನು ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಬಸವರಾಜಪ್ಪ ಬೆಳಗಾವಿ ಅವರು ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ಉಪಸ್ಥಿತರಿದ್ದರು.



ವಿದ್ಯಾಸಂಸ್ಥೆಯ ಸಹ ಕಾರ್ಯದರ್ಶಿ ಎಂ. ಕೆ. ಬಕ್ಕಪ್ಪ ಅವರು ಸಾಂದರ್ಭಿಕವಾಗಿ ಮಾತನಾಡಿ, 1962 ರಲ್ಲಿ ದಾವಣಗೆರೆಯ ಹಳೇ ನಗರ ಪ್ರದೇಶದಲ್ಲಿ ಮಹಿಳೆಯರು ಹೈಸ್ಕೂಲ್ ವಿದ್ಯಾಭ್ಯಾಸಕ್ಕಾಗಿ ಹಳಿ ಆಚೆ ಇದ್ದ ಸೀತಮ್ಮ ಬಾಲಿಕೆಯರ ಪ್ರೌಢಶಾಲೆಗೆ ಹೋಗಬೇಕಿತ್ತು. ಅನೇಕ ಪೋಷಕರು 7ನೆ ತರಗತಿಗೇ ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸುತ್ತಿದುದನ್ನು ವೀರಭದ್ರಪ್ಪ ಎಂ. ಚಿಗಟೇರಿ ಅವರು ಮನಗೊಂಡು, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯನ್ನು ಪ್ರಾರಂಭಿಸುವುದರ ಮುಖಾಂತರ, ಹೆಣ್ಣೊಂದು ಕಲಿತರೆ ಶಾಲೆಯೊಂದು ತರೆದಂತೆ ಎಂಬುದನ್ನು ಆಚರಣೆಗೆ ತಂದರು ಎಂದು ಹೇಳಿದರು.

ಅದೇ ವರ್ಷ ಬಾಲಕರಿಗಾಗಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ ತೆರೆದು, ವಿದ್ಯಾಸಂಸ್ಥೆಗೆ 1962 ರಲ್ಲಿ ಚೀನಾ ಯುದ್ಧ ನಡೆದಾಗ ಚಿತ್ರದುರ್ಗ ಬೃಹನ್ಮಠದ ಶೂನ್ಯಪೀಠಾಧ್ಯಕ್ಷರು ರಾಷ್ಟ್ರಕ್ಕೆ ಮಠದ ಖಜಾನೆಯಲ್ಲಿ ಇದ್ದ ಬಂಗಾರದ ಆವುಗೆ, ಕಿರೀಟ, ಮುದ್ರೆಯುಂಗುರ ಹಾಗೂ ಇಡೀ ಬಂಗಾರವನ್ನೇ ಅರ್ಪಿಸಿದ್ದ ಶ್ರೀ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳ ಹೆಸರಿನಲ್ಲಿ ವಿದ್ಯಾಸಂಸ್ಥೆ ಎಂದು ನಾಮಕರಣ ಮಾಡಿದರು ಎಂದು ಬಕ್ಕಪ್ಪ ತಿಳಿಸಿದರು.

ಅತೀ ಕಡಿಮೆ ಶುಲ್ಕ ಪಡೆದು, ಎರಡೂ ಶಾಲೆಗಳು ಅತ್ಯುತ್ತಮ ಫಲಿತಾಂಶ ನೀಡುತ್ತಿವೆ. ಈಗ ಈ ಸಂಸ್ಥೆಯ ಆಶ್ರಯದಲ್ಲಿ 9 ಶಾಲೆಗಳು ಸುವ್ಯವಸ್ಥಿತವಾಗಿ ನಡೆಯುತ್ತಿವೆ. ಇಂತಹ ವಿದ್ಯಾಪೋಷಕರು ಲಿಂಗೈಕ್ಯರಾಗಿ ಇಂದಿಗೆ 31 ವರ್ಷಗಳು ತುಂಬಿವೆ. ಅವರ ಜೊತೆ ಕೈಜೋಡಿಸಿದ್ದ ಎಂ. ಕೆ. ಶಿವಪ್ಪನವರು ಮಕ್ಕಳಲ್ಲಿ ವಚನ ಸಾಹಿತ್ಯ ಕಲಿಸಿದರೆ ಮುಂದೆ ಕಾಯಕ ಹಾಗೂ ದಾಸೋಹ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಎನ್ನುವ ಉದ್ದೇಶದಿಂದ ವಚನ ಗಾಯನ ಸ್ಪರ್ಧೆಯನ್ನು ಆಯೋಜಿಸಿದ್ದರು ಎಂದು ಮಾರ್ಮಿಕವಾಗಿ ನುಡಿದರು.

> ಹೆಣ್ಣೊಂದು ಕಲಿತರೆ ಶಾಲೆಯೊಂದು ತರೆದಂತೆ ಎಂಬುದನ್ನು ಅಕ್ಷರಶಃ ಆಚರಣೆಗೆ ತಂದವರು ವೀರಭದ್ರಪ್ಪ ಎಂ. ಚಿಗಟೇರಿ.
>
> **-ಎಂ.ಕೆ. ಬಕ್ಕಪ್ಪ,** ಸಹ ಕಾರ್ಯದರ್ಶಿ, ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ

ಎಂ. ಕೆ. ಶಿವಯೋಗಪ್ಪ, ಎಂ. ಕೆ. ನಾಗರಾಜ್, ಶಾಲಾ ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ಕೆ. ಬಿ. ಶಾಂತಕುಮಾರಿ ಹಾಗೂ ಶ್ರೀಮತಿ ಎಸ್. ಎಂ. ಶೈಲಜಾ, ಎಸ್. ನಾಗರಾಜ್, ಶ್ರೀಮತಿ ಎಂ. ಎಸ್. ವೀರಮ್ಮ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಶಾಂತಯ್ಯ ಪರಡಿಮಠ್ ನಿರೂಪಿಸಿದರು. ಜಿ. ಎಂ. ಪ್ರಭುದೇವ್ ವಂದಿಸಿದರು.

## ಮುನ್ನುಡಿ ಬರೆದಿದ್ದು ಕಾಂಗ್ರೆಸ್

(1ನೇ ಪುಟದಿಂದ) ಸಂತ ಸೇವಾಲಾಲ್ ಅವರು ಜನರು ನಾಗರಿಕರಾಗಿ ಬೆಳೆಯುವಂತೆ ಸಂದೇಶ ನೀಡಿದವರಾಗಿದ್ದು, ಸಮಾಜದ ಮುಖಂಡರಾದ ಪರಮೇಶ್, ಭೀಮಾನಾಯ್ಕ, ಶಿವಮೂರ್ತಿ, ರಾಜೀವ್ ನಮ್ಮ ಸರ್ಕಾರದ ಅವಧಿಯಲ್ಲಿ ಶಾಸಕರಾಗಿದ್ದಾಗ ಸಮಾಜದ ಪ್ರಗತಿಗೆ ಮನವಿ ಮಾಡಿದ್ದನ್ನು ವಿವರಿಸಿದರು.

2015 ರ ಸೇವಾಲಾಲ್ ಜಯಂತಿಗೆ ತಾವು ಬಂದಿದ್ದು ಅನುದಾನ ಕೇಳಿಕೊಂಡಿದ್ದ ಮೇರೆಗೆ ವಿವಿಧ ಅಭಿವೃದ್ದಿಗೆ ಒಟ್ಟು 50 ಕೋಟಿ ರೂ. ಗಳನ್ನು ನೀಡಿ ಸುಕ್ಷೇತ್ರದ ಅಭಿವೃದ್ದಿಗೆ ಹಣ ಮಂಜೂರು ಮಾಡಿದ್ದನ್ನು ವಿವರಿಸಿದರು.

ಸಮಾಜದ ಎಲ್ಲಾ ಜನಾಂಗಗಳ ಅಭಿವೃದ್ಧಿ ಮತ್ತು ಜಾಗೃತಿಗಾಗಿ 1996 ರಲ್ಲಿ ಸರ್ಕಾರದಿಂದ ಜಯಂತಿ ಆಚರಿಸುವಂತೆ ಘೋಷಣೆ ಮಾಡಿದ್ದು ತಮ್ಮ ಸರ್ಕಾರ ಎಂದು ಸ್ಪಷ್ಟ ಪಡಿಸಿದರು.

ಮಾಜಿ ಸಚಿವ ಶಿವಮೂರ್ತಿನಾಯ್ಕ ಅವರು ಮುಖ್ಯಮಂತ್ರಿ ಬಿಎಸ್‌ವೈ ಮಾತನಾಡುವ ಸಂದರ್ಭದಲ್ಲಿ ರಸ್ತೆ, ರೈಲ್ವೆ ಅನುದಾನಕ್ಕಿಂತ ಮುಖ್ಯವಾಗಿ ಮೆಡಿಕಲ್ ಕಾಲೇಜು ಸ್ಥಾಪಿಸುವಂತೆ ಪ್ರೇಕ್ಷಕ ಸ್ಥಳದಲ್ಲಿ ಪ್ರಶ್ನಿಸಿದ್ದನ್ನು ಸಭೆ ಗಮನಕ್ಕೆ ತಂದಾಗ ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯನವರು, ಮೆಡಿಕಲ್ ಕಾಲೇಜು ಈ ಸರ್ಕಾರದಲ್ಲಿ ಆಗಲೇ ಬೇಕು ಎಂದು ತಮ್ಮ ಒತ್ತಾಯವಿದ್ದು ಆಗದೇ ಇದ್ದಲ್ಲಿ, ಈ ಕಾರ್ಯವನ್ನು ಮುಂದೆ ನಮ್ಮ ಸರ್ಕಾರ ಬಂದಾಗ ಕ್ಷೇತ್ರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಮಾಜಿ ಸಚಿವ ಹಾಗೂ ಶಾಸಕ ಪಿ.ಟಿ.ಪರಮೇಶನಾಯ್ಕ, ಹಗರಿಬೊಮ್ಮನಹಳ್ಳಿ ಶಾಸಕ ಭೀಮಾನಾಯ್ಕ, ತಾಂಡಾಭಿವೃದ್ಧಿ ನಿಗಮದ ಅಧ್ಯಕ್ಷ ಪಿ.ರಾಜೀವ್, ಶಿವಮೊಗ್ಗ ಗ್ರಾಮಾಂತರ ಶಾಸಕ ಅಶೋಕನಾಯ್ಕ, ದ್ಯಾಮನಾಯ್ಕ, ಈಶ್ವರನಾಯ್ಕ, ಮಾಜಿ ಶಾಸಕ ಡಿ.ಜಿ.ಶಾಂತನಗೌಡ, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಎಚ್.ಬಿ.ಮಂಜಪ್ಪ, ಎಚ್.ಎ.ಉಮಾಪತಿ, ಶೇಷಾದ್ರಿ, ಬಾಲರಾಜ್, ಅನಿತಾಕುಮಾರಿ, ವೀರೇಶ್‌ನಾಯ್ಕ, ರಾಮಪ್ಪ ಲಂಬಾಣಿ, ದುದ್ಯಾನಾಯ್ಕ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಬ್ಯೂಟಿಷಿಯನ್ ಶಿಬಿರ

ದಾವಣಗೆರೆ ಫೆ. 14-ಇಂಟರ್‌ನ್ಯಾಷನಲ್ ಗೋಲ್ಡನ್ ಬ್ಯೂಟಿ ಅಕಾಡೆಮಿ ವತಿಯಿಂದ ಇದೇ ದಿನಾಂಕ 15ರಂದು ಬ್ಯೂಟಿಷಿಯನ್ ತರಬೇತಿ ಹಮ್ಮಿಕೊಂಡಿರುವುದಾಗಿ ಅಕಾಡೆಮಿಯ ಮಮತಾ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಾಹಿತಿಗಾಗಿ 73386 58739 (ಮಮತ) ಹಾಗೂ 98453 91150 (ಆರ್ಯ) ಅವರುಗಳನ್ನು ಸಂಪರ್ಕಿಸಬಹುದು. ಪತ್ರಿಕಾಗೋಷ್ಠಿಯಲ್ಲಿ ಸಬಿತಾ, ಕಾವ್ಯ, ಆರ್ಯ ಮತ್ತಿತರರಿದ್ದರು.

## ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ನಮನ



ದಾವಣಗೆರೆ, ಫೆ.14- ಕಣಿವೆ ರಾಜ್ಯದ ಪುಲ್ವಾಮಾ ಬಳಿ 2019ರ ಫೆಬ್ರವರಿ14ರಂದು ಉಗ್ರರ ದಾಳಿಗೆ 40 ಮಂದಿ ಸಿ.ಆರ್.ಪಿ.ಎಫ್ ಯೋಧರು ಹುತಾತ್ಮರಾಗಿ, 39 ಯೋಧರು ಗಂಭೀರವಾಗಿ ಗಾಯಗೊಂಡಿದ್ದರು. ಆ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರಿಗೆ ನಗರದ ಹೊಂಡದ ವೃತ್ತದಲ್ಲಿ ಹಿಂದೂ ಪರ ಸಂಘಟನೆಗಳಿಂದ ವೀರ ಯೋಧರ ಭಾವಚಿತ್ರಕ್ಕೆ ಪುಷ್ಪ ಮಾಲೆ ಹಾಕುವುದರ ಮೂಲಕ ನಮನವನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿಯ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಹಿಂದೂ ಜಾಗರಣ ವೇದಿಕೆಯ ರಾಕೇಶ್ ಜಾಧವ್, ಕೆ.ಆರ್. ಮಲ್ಲಿಕಾರ್ಜುನ್, ತಿಲಕ್, ಮಂಜುನಾಥ್, ಸೋಮಶೇಖರ ರೆಡ್ಡಿ, ಮಂಜುನಾಥ್ ನಿಬ್ಬೂರು, ನವೀನ್‌ಕುಮಾರ್, ರಾಕೇಶ್ ಬಜರಂಗಿ, ಪ್ರವೀಣ್ ಜಾಧವ್, ರಮೇಶ್ ಮತ್ತಿತರರಿದ್ದರು.

## ಶಾಮನೂರು ಆಂಜನೇಯ ದರ್ಶನ ಪಡೆದ ಸರ್ಜಾ

ದಾವಣಗೆರೆ, ಫೆ.15- ತಾವು ನಟಿಸಿರುವ ಬಹು ನಿರೀಕ್ಷಿತ ಪೊಗರು ಸಿನಿಮಾದ ಆಡಿಯೋ ರಿಲೀಸ್‌ಗಾಗಿ ಬೆಣ್ಣೆನಗರಿಗೆ ಇಂದು ನಟ ಧ್ರುವ ಸರ್ಜಾ ಆಗಮಿಸಿದ್ದರು.

ನಗರದ ಹೈಸ್ಕೂಲ್ ಮೈದಾನದಲ್ಲಿ ಸಂಜೆ ಆಡಿಯೋ ರಿಲೀಸ್ ಗೂ ಮುನ್ನ ಆಂಜನೇಯನ ಪರಮ ಭಕ್ತರಾಗಿರುವ ಧ್ರುವ ಸರ್ಜಾ ಶಾಮನೂರಿನಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ತೆರಳಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿ, ಪೊಗರು ಸಿನಿಮಾದ ಯಶಸ್ಸಿಗೆ ಪ್ರಾರ್ಥಿಸಿದರು.

**ಅಭಿಮಾನಿಗಳ ದಂಡು:** ನೆಚ್ಚಿನ ನಟನ ನೋಡಲು ದೇವಸ್ಥಾನದ ಮುಂದೆ ಅಭಿಮಾನಿಗಳ ದಂಡೇ ಹರಿದು ಬಂದಿತ್ತು. ಆಡಿಯೋ ರಿಲೀಸ್ ವಿಚಾರ ತಿಳಿದಿದ್ದ ಅಭಿಮಾನಿಗಳು ಧ್ರುವ ಸರ್ಜಾ ಅವರನ್ನು ನೋಡಲು ಕಾತುರದಿಂದ ಕಾದಿದ್ದರು. ಶಾಮನೂರಿನ ಆಂಜನೇಯ ದೇವಸ್ಥಾನಕ್ಕೆ ಬಂದಿರುವ ವಿಚಾರ ತಿಳಿದು ಅಭಿಮಾನಿ ಗಳು ಮುಗಿಬಿದ್ದಿದ್ದರು. ದೇವರ ದರ್ಶನ ಪಡೆದು ಹೊರ ಬರುತ್ತಿದ್ದಂತೆ ದೇವಸ್ಥಾನದ ಮುಂದೆ ಜಮಾಯಿಸಿದ್ದ ಅಭಿಮಾನಿಗಳು ನೆಚ್ಚಿನ ನಟನ ಕಣ್ತುಂಬಿಕೊಳ್ಳಲು ನಟನ್ನು ಬಳಿ ಹೋಗಲು ಮುಂದಾದಾಗ ನೂಕು ನುಗ್ಗಲು ಉಂಟಾಗಿತ್ತು. ಸಿಳ್ಳೆ ಕೇಕೆ ಹೊಡೆಯುತ್ತಾ ಧ್ರುವ ಸರ್ಜಾ ಸುತ್ತ ಅಭಿಮಾನಿಗಳು ಸೇರಿದ್ದರು. ಧ್ರುವ ಸರ್ಜಾಗೆ ದೇವಸ್ಥಾನದಿಂದ ಹೊರ ಬರಲು ಜಾಗ ಬಿಡದೆ ಮುಗಿ ಬಿದ್ದರು.

# ಅವಕಾಶಗಳನ್ನು ಸದ್ವಿನಿಯೋಗಿಸಿಕೊಂಡು ಸಮಾಜಮುಖಿಯಾಗಿ ಬೆಳೆಯಬೇಕು

### ಜಿಲ್ಲಾ ಮಟ್ಟದ ಮಹಿಳಾ ಜಾಗೃತಿ ಶಿಬಿರದಲ್ಲಿ ಸೇವಾದಳದ ಪೂರ್ಣಿಮಾ ಕರೆ

ದಾವಣಗೆರೆ, ಫೆ.14- ಹಿಂದಿನ ಕಾಲದಲ್ಲಿ ಮಹಿಳೆಯರಿಗೆ ಅವಕಾಶಗಳಿರಲಿಲ್ಲ ಹಾಗೂ ಮನೆಯಿಂದ ಹೊರ ಬರುವ ಸ್ವಾತಂತ್ರ್ಯವೂ ಇರಲಿಲ್ಲ. ಆದರೀಗ ಕಾಲ ಬದಲಾಗಿದ್ದು, ಇರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರುವ ಜೊತೆಗೆ ಸಮಾಜಮುಖಿಯಾಗಿ ಬೆಳೆಯುವಂತೆ ಭಾರತ ಸೇವಾದಳದ ಮಹಿಳಾ ಸಂಘಟನಾ ಕಾರ್ಯದರ್ಶಿ ಹೆಚ್.ಎಸ್. ಪೂರ್ಣಿಮಾ ಕರೆ ನೀಡಿದರು.

ನಗರದ ಭಾರತ ಸೇವಾದಳ ಭವನದಲ್ಲಿ ಭಾರತ ಸೇವಾದಳ, ಅಕ್ಕಮಹಾದೇವಿ ಮಹಿಳಾ ಸಂಘ, ಜಾಗೃತ ಮಹಿಳಾ ಸಂಘ, ಮಹಿಳಾ ಸೇವಾ ಸಮಾಜ, ಸಹೋದರಿ ನಿವೇದಿತ ಮಹಿಳಾ ಸಂಘ ಹಾಗೂ ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ಮೊನ್ನೆ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಮಹಿಳಾ ಜಾಗೃತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈಗಿನ ಮಹಿಳೆಯರು ಯಾವುದರಲ್ಲೂ ಕಡಿಮೆ ಇಲ್ಲ. ಆದರೆ, ವ್ಯವಸ್ಥಿತ ಆಯಕಟ್ಟಿನ ಜಾಗಗಳು ಸಿಗುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಎಲೆಮರೆ ಕಾಯಿಯಂತೆ ಕೆಲಸ ಮಾಡಿ ಉತ್ತಮ ಸಾಧನೆ ಮಾಡಿರುವ ಮಹಿಳೆಯರ ಸೇವೆ ಗುರುತಿಸಿ ಪದ್ಮಶ್ರೀ, ಪದ್ಮವಿಭೂಷಣ ಸೇರಿದಂತೆ ಹಲವು ಪ್ರಶಸ್ತಿಗಳನ್ನು ನೀಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ತಮ್ಮ ಪ್ರಾಣದ ಹಂಗು ತೊರೆದು ಜನರ ರಕ್ಷಣೆಗಾಗಿ ಕೆಲಸ ಮಾಡಿದ ಕೊರೊನಾ ವಾರಿಯರ್ಸ್ ನಿಜಕ್ಕೂ ನಮಗೆ ದೇವರ ಸಮಾನ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಭಾರತ ಸೇವಾದಳದ ಜಿಲ್ಲಾಧ್ಯಕ್ಷ ಕೆ.ಆರ್. ಜಯದೇವಪ್ಪ ಮಾತನಾಡಿ, ಕೊರೊನಾ ಸಂಕಷ್ಟದ ಸಮಯದಲ್ಲಿ ವೈದ್ಯರು, ಶುಶ್ರೂಷಕಿಯರು, ವೈದ್ಯಕೀಯ ತಂತ್ರಜ್ಞರು, ಆಶಾ ಕಾರ್ಯಕರ್ತೆಯರು ತಮ್ಮ ಆರೋಗ್ಯ ಲೆಕ್ಕಿಸದೆ ದೇಶದ ಹಿತಾಸಕ್ತಿಯಿಂದ ಹಗಲಿರುಳು ಶ್ರಮಿಸಿ ಕೊರೊನಾ ಪೀಡಿತರ ಸೇವೆ ಮಾಡಿರುವುದಾಗಿ ಶ್ಲಾಘಿಸಿದರು.

ಮಹಿಳೆಯರ ಕುರಿತು ಶಿಕ್ಷಣಾಧಿಕಾರಿ ಪುಷ್ಪಲತಾ ಉಪನ್ಯಾಸ ನೀಡಿದರು. ಭಾರತ ಸೇವಾದಳದ ಸದಸ್ಯೆ ನೀಲಗುಂದ ಜಯಮ್ಮ, ಶುಶ್ರೂಷಕಿಯರು, ಆಶಾ ಕಾರ್ಯಕರ್ತೆಯರು ಸೇರಿದಂತೆ ಹಲವು ಕೊರೊನಾ ವಾರಿಯರ್ಸ್ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಭಾರತ ಸೇವಾದಳದ ಕೇಂದ್ರ ಸಮಿತಿ ಸದಸ್ಯೆ ಕಲ್ಪನ ಶಿವಣ್ಣ, ದಾವಣಗೆರೆ ತಾಲ್ಲೂಕು ಶಾಖೆ ಅಧ್ಯಕ್ಷ ಟಿ.ನಾಗರಾಜ್, ಉಮಾ ವೀರಭದ್ರಪ್ಪ, ಎಂ.ಅಣ್ಣಯ್ಯ, ಚನ್ನಪ್ಪ ಸೇರಿದಂತೆ ಇತರರು ಇದ್ದರು.

ಮಮತಾ ನಾಗರಾಜ ಕಾರ್ಯಕ್ರಮ ನಿರೂಪಿಸಿದರು.


ಸುಂದರವಾದ ವಿವಿಧ ರೀತಿಯ
ಕಾಟನ್ ಸೀರೆಗಳು, ಕಲಂಕಾರಿ, ಚಂದೇರಿ, ಭಾಗಲ್ಪುರ್ ಕಾಟನ್, ಕಾಟನ್ ಬನಾರಸ್, ಮಟ್ಕಾ ಸಿಲ್ಕ್, ಕ್ರೇಪ್ ಸಿಲ್ಕ್ ಕಟ್ ವರ್ಕ್, ಕಂಚಿ ಸೀರೆಗಳು, ಶಿಫಾನ್, ಸಿಂಥೆಟಿಕ್, ಇನ್ನಿತರೆ ನವೀನ ರೀತಿಯ ಸಂಗ್ರಹದಿಂದ ಕಂಗೊಳಿಸುತ್ತಿದೆ.
ರಚನಾ ಸೆಕ್ಷನ್ಸ್
# 671, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ - 577 002.
ಮೊ. 98445 44111, 98441 44111

ಶಾಕೀರ ಗಾರ್ಮೆಂಟ್ಸ್ ಫ್ಯಾಕ್ಟ್ರಿ
SHAKEERA GARMENTS FACTORY
200 ಜನ ಅನುಭವವುಳ್ಳ ಟೈಲರ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ. ಹೊಸಬರಿಗೂ ತರಬೇತಿ ಕೊಡಲಾಗುವುದು. PF/ESI ಸೌಲಭ್ಯವಿರುತ್ತದೆ.
Wanted 200 Tailors & Helpers
Plot No. 57A, Karuru Industrial Area, D.C. Office Main Road, Davanagere.
97434 46516, 70198 38653

ARADHYA STEEL PVT LTD
Near Anagodu, Davanagere - 577 556
ಕಂಪನಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ
ವಯಸ್ಸು : 18-30ರ ಒಳಗೆ
ITI-Fitter (10), ITI-Turner (05),
ITI- Welder (05), Plumber -02
ಸಂದರ್ಶನದ ಸಮಯ : ಬೆಳಿಗ್ಗೆ 10.00 ರಿಂದ 4.00
Contact No. 91135 92331/88846 20546
By - ARCO-HR Services, Davangere


# ಇತಿಹಾಸದಲ್ಲಿ ಉಳಿಯುವ ಕಾರ್ಯವನ್ನು ಮಾಡಿದ ಪುಟ್ಟರಾಜ ಗವಾಯಿಗಳು

### ಶ್ರೀ ಕಲ್ಲಯ್ಯಜ್ಜನವರ ವಿಶ್ಲೇಷಣೆ

ದಾವಣಗೆರೆ, ಫೆ. 14- ಪುಟ್ಟರಾಜ ಗವಾಯಿಗಳು ಇತಿಹಾಸದಲ್ಲಿ ಉಳಿಯುವ ಕಾರ್ಯವನ್ನು ಮಾಡಿದರು ಎಂದು ಗದಗ-ದಾವಣಗೆರೆ-ಶಿವಮೊಗ್ಗ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜ ಅವರು ವಿಶ್ಲೇಷಿಸಿದರು.


ಶ್ರೀಗಳು ನಗರದ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದಲ್ಲಿ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರ ಪುರಾಣ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಯಡಿಯೂರು ಸಿದ್ಧಲಿಂಗೇಶ್ವರರು ಮತ್ತು ಪುಟ್ಟರಾಜ ಗವಾಯಿಗಳು ನಿಸ್ವಾರ್ಥ ಭಾವನೆಯಿಂದ ನಶಿಸುತ್ತಿರುವ ಧರ್ಮವನ್ನು ಉಳಿಸಲು ಶ್ರಮಿಸಿದರು ಎಂದು ಸ್ಮರಿಸಿದರು.

ಇಬ್ಬರೂ ಮಹಾಪುರುಷರು ತಮ್ಮ ಜೀವನದಲ್ಲಿ ಅನೇಕ ಅಡೆ-ತಡೆಗಳನ್ನು ಎದುರಿಸಿ, ಲೋಕ ಕಲ್ಯಾಣಕ್ಕಾಗಿ ಮುಂದಾದರು ಎಂದು ಹೇಳಿದರು.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಇಬ್ಬರೂ ತಮ್ಮ ಬಾಲ್ಯದಲ್ಲಿಯೇ ತಮ್ಮ ಪವಾಡವನ್ನು ತೋರಿಸಿದರು ಎಂದರು.

ಪುಟ್ಟರಾಜ ಗವಾಯಿಗಳು, ಪ್ರತಿವರ್ಷ ಪುರಾಣ ಪ್ರವಚನವನ್ನು ಅನೇಕ ವರ್ಷಗಳ





ಕಾಲ ನಡೆಸಿಕೊಂಡು ಬಂದರು. ಗದಗದಲ್ಲಿ ಅಂಧ ಮಕ್ಕಳ ಆಶ್ರಮ ಸ್ಥಾಪನೆಯಾದ ನಂತರ ದಾವಣಗೆರೆಯಲ್ಲಿ ಎರಡನೆಯ ಆಶ್ರಮವನ್ನು ಆರಂಭಿಸಲು ಪ್ರೇರಣೆ ನೀಡಿದರು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಕಲ್ಲಯ್ಯಜ್ಜನವರಿಗೆ 1456ನೇ ತುಲಾಭಾರವನ್ನು ಶ್ರೀಮತಿ ಪದ್ದಮ್ಮ ಕೋಂ ದಿ. ನಾರಾಯಣಪ್ಪ ಮತ್ತು ಮಕ್ಕಳು ನಡೆಸಿಕೊಟ್ಟರು.

ಯಾದಗಿರಿಯ ತೋಟಯ್ಯ ಶಾಸ್ತ್ರಿಗಳು ಯಡಿಯೂರು ಸಿದ್ಧಲಿಂಗೇಶ್ವರ ಸ್ವಾಮಿ ಪುರಾಣ ಪ್ರವಚನ ನಡೆಸಿಕೊಟ್ಟರು. ಕೊರೊನಾ ಕಾರಣದಿಂದಾಗಿ ಒಂದು ತಿಂಗಳ ಪುರಾಣ ಪ್ರವಚನವನ್ನು ಒಂದು ದಿನಕ್ಕೆ ಸೀಮಿತಗೊಳಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಶ್ರೀ ಬಕ್ಕೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಮಾಗಾನಹಳ್ಳಿ ಶಿವಾನಂದಪ್ಪ, ದಾವಣಗೆರೆ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ನಗರ ಪಾಲಿಕೆ ಸದಸ್ಯರಾದ ದೇವರಮನೆ ಶಿವಕುಮಾರ್, ಸೋಗಿ ಶಾಂತಕುಮಾರ್ ಮತ್ತಿತರರು ಆಗಮಿಸಿದ್ದರು.

ಆರಂಭದಲ್ಲಿ ಅಜ್ಜಂಪುರ ಶೆಟ್ರು ಮೃತ್ಯುಂಜಯ ಸ್ವಾಗತಿಸಿದರು.

# ತವಾಂಗ್ ಭಾರತಕ್ಕೆ ಸೇರಿಸಿದ ಮೇಜರ್ ಖಾಥಿಂಗ್‌ಗೆ ಮೊದಲ ಬಾರಿಗೆ ಗೌರವ

## ಯೋಧನ ಗೌರವ ಸ್ಮಾರಕಕ್ಕೆ ಶಿಲಾನ್ಯಾಸ

ತವಾಂಗ್, ಫೆ. 14 – ಅರುಣಾಚಲ ಪ್ರದೇಶದಲ್ಲಿರುವ ತಾವಂಗ್ ಅನ್ನು ಭಾರತಕ್ಕೆ ಸೇರ್ಪಡೆ ಮಾಡಲು ಕಾರಣಕರ್ತರಾದ ಮೇಜರ್ ರಾಲೆಂಗ್ನಾವ್ ಬಾಬ್ ಖಾಥಿಂಗ್ ಅವರನ್ನು ಮೊದಲ ಬಾರಿಗೆ ಗೌರವಿಸಲಾಗಿದೆ. ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಜನರಲ್ ಬಿಪಿನ್ ರಾವತ್, ಇಬ್ಬರು ಮುಖ್ಯಮಂತ್ರಿಗಳು, ಕೇಂದ್ರ ಸಚಿವರು ಹಾಗೂ ರಾಜ್ಯಪಾಲರ ಸಮ್ಮುಖದಲ್ಲಿ ಅವರ ಗೌರವ ಸ್ಮಾರಕಕ್ಕೆ ಶಿಲಾನ್ಯಾಸ ನೆರವೇರಿಸಲಾಗಿದೆ.

ಆಗ ಈಶಾನ್ಯ ಗಡಿ ಸಂಸ್ಥೆ ಎಂದು ಕರೆಸಿಕೊಳ್ಳುತ್ತಿದ್ದ ಅರುಣಾಚಲ ಪ್ರದೇಶದ ಸಹಾಯಕ ರಾಜಕೀಯ ಅಧಿಕಾರಿಯಾಗಿದ್ದ ಮೇಜರ್ ಖಾಥಿಂಗ್, 1950ರಲ್ಲಿ ತವಾಂಗ್ ಅನ್ನು ಭಾರತೀಯ ಪ್ರಾಂತ್ಯಕ್ಕೆ ಸೇರಿಸಲು ದಿಟ್ಟ ಕಾರ್ಯಾಚರಣೆ ಮಾಡಿದ್ದರು. ಆಗಿನ ಅಸ್ಸಾಂ ರಾಜ್ಯಪಾಲ ಜೈರಾಮದಾಸ್ ದೌಲತ್‌ರಾಮ್ ಅವರ ಉಸ್ತುವಾರಿಯಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು.

ತವಾಂಗ್‌ನ ಕಲವಂಗ್ಪೊ ಸಭಾಂಗಣದಲ್ಲಿ ನಡೆಸಲಾದ ಕಾರ್ಯಕ್ರಮದಲ್ಲಿ ಮೇಜರ್ ಖಾಥಿಂಗ್ ಅವರ ಸ್ಮಾರಕಕ್ಕೆ ಶಿಲಾನ್ಯಾಸ ನೆರವೇರಿಸ ಲಾಯಿತು. ಕಾರ್ಯಕ್ರಮದಲ್ಲಿ ಅರುಣಾ ಚಲ ಪ್ರದೇಶದ ಮುಖ್ಯಮಂತ್ರಿ ಪೇಮಾ ಖಂಡು, ಮೇಘಾಲಯದ ಮುಖ್ಯಮಂತ್ರಿ ಕೊ ನ್ರಾಡ್ ಸಂಗ್ಮಾ, ಕೇಂದ್ರ ಕ್ರೀಡಾ ಸಚಿವ ಕಿರೆನ್ ರಿಜಿಜು, ಅರುಣಾಚಲ ಪ್ರದೇಶದ ರಾಜ್ಯಪಾಲ ಬ್ರಿಗೇಡಿಯರ್ (ನಿವೃತ್ತ) ಬಿ.ಡಿ. ಮಿಶ್ರ ಹಾಗೂ ಜನರಲ್ ರಾವತ್ ಅವರು ಉಪಸ್ಥಿತರಿದ್ದರು.

ತವಂಗ್ ಧೀರನ ಕೊಡುಗೆ ಮರೆಯಲಾಗದು. ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ಖಾಥಿಂಗ್ ಅವರಿಗೆ ಸೂಕ್ತ ಮಾನ್ಯತೆ ನೀಡಬೇಕು. ಹೀಗಾಗಿ ಭವ್ಯ ಸಮಾರಂಭ ಆಯೋಜಿಸಲಾಗಿದೆ ಎಂದು ರಿಜಿಜು ಹೇಳಿದ್ದಾರೆ. ಸಮಾರಂಭದಲ್ಲಿ ಖಾಥಿಂಗ್ ಕುಟುಂಬದ ಸದಸ್ಯರು ಭಾಗಿಯಾಗಿದ್ದರು.

ಇದಕ್ಕೂ ಮುಂಚೆ ಎರಡನೇ ವಿಶ್ವ ಸಮರದ ಸಂದರ್ಭದಲ್ಲಿ ತವಂಗ್ ಪ್ರದೇಶವು ಸ್ವತಂತ್ರ ಟಿಬೆಟ್ ಸರ್ಕಾರದ ಭಾಗವಾಗಿತ್ತು. ಬ್ರಿಟಿಷರ ಹಲ ವಾರು ಪ್ರಯತ್ನದ ಹೊರತಾಗಿಯೂ ಈ ಪ್ರದೇಶ ವನ್ನು ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ.

ಮಣಿಪುರದ ನಾಗಾ ಬುಡಕಟ್ಟಿಗೆ ಸೇರಿದ್ದ ಖಾಥಿಂಗ್, ಜನವರಿ 17, 1951ರಲ್ಲಿ ಅಸ್ಸಾಂ ರೈಫಲ್‌ನ 200 ಸೈನಿಕರೊಂದಿಗೆ ತವಾಂಗ್ ಕಡೆ ತೆರಳಬೇಕೆಂದು ದೌಲತ್‌ರಾಮ್ ಆದೇಶ ಹೊರಡಿಸಿದ್ದರು.

ಟಿಬೆಟ್‌ನ ಕಠಿಣ ತೆರಿಗೆ ಹೇರಿಕೆಯಿಂದ ಸ್ಥಳೀಯ ಮೊನ್ಪಾ ಸಮುದಾಯ ಬಳಲಿತ್ತು ಎಂಬುದನ್ನು ಖಾಥಿಂಗ್ ಮನಗಂಡಿದ್ದರು.

ಭಾರತ ಪ್ರಜಾಪ್ರಭುತ್ವದ ಬಗ್ಗೆ ತಿಳಿಸಿದ್ದ ಅವರು, ಭಾರತ ಎಂದೂ ಅಸಮರ್ಥ ನೀಯ ತೆರಿಗೆ ಹೇರುವುದಿಲ್ಲ ಎಂದಿದ್ದರು. ಈ ರೀತಿ ಅವರು ತಮ್ಮ ರಾಯಭಾರಿ ಕೌಶಲ್ಯದ ಮೂಲಕ ಸ್ಥಳೀಯರ ಮನ ಗೆದ್ದಿದ್ದರು.

ನಂತರ ಅಸ್ಸಾಂ ರೈಫಲ್‌ನ ಸೈನಿಕರು ತವಂಗ್ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರು. ನಂತರ ತವಂಗ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸಲಾಗಿತ್ತು. ತವಂಗ್ ಹಾಗೂ ಬುಮ್ಲಾ ಪ್ರದೇಶಗಳು ಭಾರತದ ಭಾಗವಾದವು.

# ಎರಡನೇ ಮಹಾಭಿಯೋಗ ದಿಂದಲೂ ಟ್ರಂಪ್ ಮುಕ್ತ



ವಾಷಿಂಗ್ಟನ್, ಫೆ. 14 – ಕಳೆದ ಜನವರಿ 6ರಂದು ಕ್ಯಾಪಿಟಲ್ ಹಿಲ್ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಹಾಭಿಯೋಗದಿಂದ ಮುಕ್ತ ರಾಗಿದ್ದಾರೆ. ಡೆಮಾಕ್ರಾಟ್‌ಗಳು ಅಗತ್ಯ ಸಂಖ್ಯಾಬಲ ಗಳಿಸಲು ವಿಫಲವಾದ ಕಾರಣ ಈ ಬೆಳವಣಿಗೆ ಯಾಗಿದೆ. ಮಹಾಭಿಯೋಗಕ್ಕೆ ಡೆಮೊ ಕ್ರಾಟ್‌ಗಳು ವಿಫಲವಾಗಿ ರುವುದು ಎರಡನೇ ಬಾರಿ.

ಶನಿವಾರದಂದು ಸೆನೆಟ್ ಮಹಾಭಿಯೋಗದ ನಿಲುವಳಿಯನ್ನು ಮತಕ್ಕೆ ಹಾಕಿತ್ತು. ಆಗ ಮಹಾಭಿ ಯೋಗದ ಪರವಾಗಿ 57 ಮತ್ತು ವಿರುದ್ಧವಾಗಿ 43 ಮತಗಳು ಚಲಾವಣೆಯಾದವು. ಸೆನೆಟ್‌ನಲ್ಲಿ ಏಳು ರಿಪಬ್ಲಿಕನ್ ಸದಸ್ಯರೂ ನಿಲುವಳಿ ಪರವಾಗಿ ಮತ ಚಲಾಯಿಸಿದರು. ಆದರೆ, ಮಹಾಭಿಯೋಗಕ್ಕೆ ಅಗತ್ಯವಾದ 67 ಮತ ಪಡೆಯಲು ಸಾಧ್ಯವಾಗಲಿಲ್ಲ. 100 ಸದಸ್ಯರ ಸೆನೆಟ್‌ನಲ್ಲಿ ಮೂರನೇ ಎರಡರಷ್ಟು ಜನರು ಮತ ಚಲಾಯಿಸಿದರೆ ಮಾತ್ರ ಮಹಾಭಿಯೋಗ ಸಾಧ್ಯವಾಗಲಿದೆ.

ಟ್ರಂಪ್ ಮಹಾಭಿಯೋಗಕ್ಕೆ ಗುರಿಯಾಗಿದ್ದರೆ, ಮತ್ತೊಮ್ಮೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲ.

ಅಮೆರಿಕದ ಅಧಿಕಾರ ಕೇಂದ್ರವಾದ ಕ್ಯಾಪಿಟಲ್ ಹಿಲ್ ಮೇಲೆ ನಡೆದ ದಾಳಿಗೆ ಟ್ರಂಪ್ ಪ್ರಚೋದನೆ ನೀಡಿದ್ದರು ಎಂದು ಆರೋಪಿಸಲಾಗಿತ್ತು. ದಾಳಿಯಲ್ಲಿ ಓರ್ವ ಪೊಲೀಸ್ ಅಧಿಕಾರಿ ಸೇರಿದಂತೆ ಐವರು ಮೃತಪಟ್ಟಿದ್ದರು.

ಎರಡು ಬಾರಿ ಮಹಾಭಿಯೋಗಕ್ಕೆ ಗುರಿಯಾದ ಮೊದಲ ಅಮೆರಿಕದ ಅಧ್ಯಕ್ಷ ಟ್ರಂಪ್ ಆಗಿದ್ದಾರೆ. ಅವರು ಅಧಿಕಾರ ತೊರೆದ ನಂತರ ಎರನಡೇ ಮಹಾಭಿಯೋಗಕ್ಕೆ ಪ್ರಯತ್ನ ನಡೆಸಲಾಗಿತ್ತು.

ಈ ಹಿಂದೆ ಅಧಿಕಾರ ದುರ್ಬಳಕೆ ಹಾಗೂ ಶಾಸನಸಭೆಗೆ ಅಡ್ಡಿಪಡಿಸಿದ ಆರೋ ಪದ ಮೇಲೆ ಮೊದಲ ಮಹಾಭಿಯೋಗಕ್ಕೆ ಮುಂದಾಗ ಲಾಗಿತ್ತು. ಫೆಬ್ರವರಿ 5, 2020ರಲ್ಲಿ ಸೆನೆಟ್ ಅವರನ್ನು ದೋಷಮುಕ್ತಗೊಳಿಸಿತ್ತು.

ಮಹಾಭಿಯೋಗದ ಫಲಿತಾಂಶ ಪ್ರಕಟವಾಗುವುದಕ್ಕೆ ಮುಂಚೆ ಹೇಳಿಕೆ ನೀಡಿದ್ದ ಟ್ರಂಪ್, ಅಮೆರಿಕದ ಯಾವೊಬ್ಬ ಅಧ್ಯಕ್ಷನೂ ಈ ರೀತಿಯ ಪರಿಸ್ಥಿತಿ ಎದುರಿಸಿರಲಿಲ್ಲ. ಇದು ಅಮೆರಿಕದದ ರಾಜಕೀಯ ಪರಿಸ್ಥಿತಿ, ಕಾನೂನು ಆಡಳಿತ ಕೈ ಬಿಟ್ಟಿರುವುದು, ಕಾನೂನು ದುರ್ಬಳಕೆ ಮಾಡಿರುವುದು ಹಾಗೂ ನ್ಯಾಯವನ್ನು ರಾಜಕೀಯ ಅಸ್ತ್ರವಾಗಿ ಬಳಕೆ ಮಾಡಿಕೊಂಡಿರುವುದನ್ನು ತೋರಿಸುತ್ತದೆ. ತಮ್ಮ ನಿಲುವಿಗೆ ಒಪ್ಪದವರನ್ನು ಪೀಡಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ವೃತ್ತ, ಪೊಲೀಸ್ ಕ್ವಾರ್ಟರ್ಸ್, ಚರ್ಚ್ ರಸ್ತೆ, ಈದ್ಗಾ ಕಾಂಪ್ಲೆಕ್ಸ್, ಅರುಣಾ ಚಿತ್ರ ಮಂದಿರ ಹಾಗೂ ಇತರೆ ಪ್ರದೇಶಗಳು. ದುರ್ಗಾಂಬಿಕ-ವಿಜಯನಗರ ಮಾರ್ಗದ ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ, ಹಾಗೂ ಇತರೆ ಪ್ರದೇಶಗಳಲ್ಲಿ ಅಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.



ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಅಭಿನಯದ ಪೊಗರು ಕನ್ನಡ ಚಿತ್ರದ ಧ್ವನಿ ಸುರುಳಿ ಬಿಡುಗಡೆ ಕಾರ್ಯಕ್ರಮವು ದಾವಣಗೆರೆ ಸರ್ಕಾರಿ ಬಾಲಕರ ಪ್ರೌಢಶಾಲಾ ಆವರಣದಲ್ಲಿ ಭಾನುವಾರ ಸಂಜೆ ನಡೆಯಿತು. ಮಾಜಿ ಮುಖ್ಯ ಮಂತ್ರಿ ಸಿದ್ಧರಾಮಯ್ಯ ಮಾತನಾಡಿದರು. ಶಾಸಕ ರೇಣುಕಾಚಾರ್ಯ, ನಟರಾದ ಅರ್ಜುನ್ ಸರ್ಜಾ, ಧ್ರುವ ಸರ್ಜಾ ಹಾಗೂ ಇತರರು ಈ ಸಂದರ್ಭದಲ್ಲಿದ್ದರು.

# 'ಜಾಧವ್ - ಜಾಧವ್ ಒಂದಾಗಬೇಕು



ದಾವಣಗೆರೆ,ಫೆ.14- 'ನನಗೆ ಸನ್ಮಾನ ಬೇಡ ; ನೀವು ಜಾಧವ್ - ಜಾಧವ್ ಒಂದಾಗಬೇಕು ; ಈ ಮೂಲಕ ಇಬ್ಬರೂ ಸೇರಿ ಸಮಾಜವನ್ನು ಮುನ್ನಡೆಸಿಕೊಂಡು ಹೋಗಬೇಕು. ಬನ್ನಿ, ನಾನು ನಿಮ್ಮಿಬ್ಬರನ್ನೂ ಜೊತೆಗೆ ನಿಲ್ಲಿಸಿ ಹಾರ ಹಾಕುತ್ತೇನೆ.'

- ಇದು, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು, ಮರಾಠ ಸಮಾಜದ ಮುಖಂಡರುಗಳಾದ ದೂಡಾ ಮಾಜಿ ಅಧ್ಯಕ್ಷರೂ ಆಗಿರುವ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಮತ್ತು ದೂಡಾ ಮಾಜಿ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಮುಖಂಡ ಮಾಲತೇಶರಾವ್ ಡಿ. ಜಾಧವ್ ಅವರಿಬ್ಬರಿಗೆ ಹೇಳಿದ ಕಿವಿಮಾತಿದು.

ಇದೇ ದಿನಾಂಕ 19ರಂದು ನಡೆಯಲಿರುವ ಶಿವಾಜಿ ಮಹಾರಾಜರ ಜಯಂತ್ಯೋತ್ಸವದ ಅಂಗವಾಗಿ ನಗರದ ಶ್ರೀ ಕೃಷ್ಣಭವಾನಿ ಕಲ್ಯಾಣ ಮಂಟಪದಲ್ಲಿ ಏರ್ಪಾಡಾಗಿ ಯೋಗಾಸನ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಿಲ್ಲಾಧಿಕಾರಿಗಳು ಕಳಕಳಯಿಂದ ಈ ಮಾತನ್ನು ಹೇಳಿದರು.

ಸಮಾರಂಭದ ಗೌರವಾನ್ವಿತ ಅತಿಥಿಯಾಗಿದ್ದ ಜಿಲ್ಲಾಧಿಕಾರಿ ಬೀಳಗಿ ಅವರಿಗೆ ಸನ್ಮಾನ ಎಂದು ಕಾರ್ಯಕ್ರಮದ ನಿರೂಪಕರು ಹೇಳುತ್ತಿದ್ದಂತೆ ಡಿಸಿ ಎದ್ದು ನಿಂತರು. 'ನನಗೆ ಸನ್ಮಾನ ಬೇಡ ; ನೀವಿಬ್ಬರೂ ಜೊತೆಯಾಗಿರಬೇಕು' ಎಂದೇಳಿದರಲ್ಲದೇ, ಅವರಿಬ್ಬರನ್ನೂ ಹತ್ತಿರಕ್ಕೆ ಕರೆದು ಜೊತೆಗೆ ನಿಲ್ಲಿಸಿಕೊಂಡರು. ಈ ವೇಳೆಗೆ ಕ್ಷತ್ರೀಯ ಮರಾಠ ವಿದ್ಯಾವರ್ಧಕ ಸಂಘದ ನಿರ್ದೇಶಕರಲ್ಲೊಬ್ಬರಾದ ಕೆ.ಎನ್.ಮಂಜೋಜಿರಾವ್ ಗಾಯಕವಾಡ್ ತಂದುಕೊಟ್ಟ ಹಾರಗಳನ್ನು ಪಡೆದ ಜಿಲ್ಲಾಧಿಕಾರಿಗಳು, ಅವರಿಬ್ಬರಿಗೂ ಹಾರ ಹಾಕಿ ಹೆಗಲ ಮೇಲೆ ಕೈ ಹಾಕಿ ಫೋಟೋಗೆ ಫೋಸ್ ನೀಡಿದಾಗ, ಪ್ರೇಕ್ಷಕರಾಗಿದ್ದ ಸಮಾಜ ಬಾಂಧವರು ಚಪ್ಪಾಳೆಗಳ ಸುರಿಮಳೆಗೈದರು.

ಕಾಂಗ್ರೆಸ್ ಮತ್ತು ಬಿಜೆಪಿ ಎರಡು ಪಕ್ಷಗಳ ನಡುವೆ ಕಳೆದ ಚುನಾವಣೆಗಳ ಸಂದರ್ಭದಲ್ಲಿ ನಡೆದ ರಾಜಕೀಯ ಘಟನೆಗಳ ಹಿನ್ನೆಲೆಯಲ್ಲಿ ಕೆಲ ದಿನಗಳಿಂದ ದೂರವಾಗಿದ್ದ ಮಾಲತೇಶರಾವ್ ಜಾಧವ್ ಮತ್ತು ಯಶವಂತರಾವ್ ಜಾಧವ್ ನಡುವಿನ ವೈಮನಸ್ಸುಗಳನ್ನು ದೂರ ಮಾಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅವರಿಬ್ಬರಿಗೂ ಹಿತನುಡಿಗಳನ್ನು ಹೇಳಿ ಹಾರ ಹಾಕುವುದರ ಮೂಲಕ ಒಂದಗೂಡಿಸುವ ಪ್ರಯತ್ನವನ್ನು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾಡಿದರು.

## ಬೆಂಗಳೂರಿನ ಪರಿಸರ ಕಾರ್ಯಕರ್ತೆ ಬಂಧನ

ನವದೆಹಲಿ, ಫೆ. 14- ಅಂತರ ರಾಷ್ಟ್ರೀಯ ಪರಿಸರ ಕಾರ್ಯಕರ್ತೆ ಗ್ರೆಟಾ ಥನ್‌ಬರ್ಗ್ ಪ್ರಕಟಿಸಿದ್ದ ರೈತರ ಹೋರಾಟದ 'ಟೂಲ್‌ಕಿಟ್' (ಮಾರ್ಗಸೂಚಿ)ಗೆ ಸಂಬಂಧಿಸಿದಂತೆ ಬೆಂಗಳೂರಿನ ಪರಿಸರ ಕಾರ್ಯಕರ್ತೆಯನ್ನು ಬಂಧಿಸಲಾಗಿದೆ. ನ್ಯಾಯಾಲಯ ಬಂಧಿತೆಯನ್ನು ಐದು ದಿನಗಳ ಕಸ್ಟಡಿಗೆ ವಹಿಸಿದೆ. ಜನವರಿ 26ರಂದು ನಡೆದ ರೈತರ ಪ್ರತಿಭಟನೆ ಹಿಂಸಾತ್ಮಕ ಸ್ವರೂಪ ಪಡೆದ ನಂತರ ಥನ್‌ಬರ್ಗ್ ಪ್ರಕಟಿಸಿದ್ದ ಟೂಲ್‌ಕಿಟ್ ಪ್ರಾಮುಖ್ಯತೆ ಪಡೆದುಕೊಂಡಿದೆ.

ದೆಹಲಿಯ ಸೈಬರ್ ದಳ ಬೆಂಗ ಳೂರಿನಲ್ಲಿ 21 ವರ್ಷದ ಕಾರ್ಯಕರ್ತೆ ದಿಶಾ ರವಿ ಅವರನ್ನು ಶನಿವಾರ ಬಂಧಿ ಸಿದೆ ಎಂದು ಹಿರಿಯ ಪೊಲೀಸರು ತಿಳಿಸಿದ್ದಾರೆ. ಬಂಧಿತೆಯನ್ನು ನ್ಯಾ ಯಾಲಯದ ಎದುರು ಹಾಜರು ಪಡಿಸಲಾಗಿದ್ದು, ಐದು ದಿನಗಳ ಕಾಲ ಕಸ್ಟಡಿಗೆ ವಹಿಸಲಾಗಿದೆ. ನ್ಯಾಯಾಲ ಯದಲ್ಲಿ ಹಾಜರಿದ್ದ ಸಂದರ್ಭದಲ್ಲಿ, ಟೂಲ್‌ಕಿಟ್‌ನ ಎರಡು ಸಾಲುಗಳನ್ನು ತಿದ್ದುಪಡಿ ಮಾಡಿದ್ದಾಗಿ ದಿಶಾ ರವಿ ಒಪ್ಪಿಕೊಂಡಿದ್ದಾರೆ.

ಗ್ರೆಟಾ ಥನ್‌ಬರ್ಗ್ ಟೂಲ್ ಕಿಟ್‌ಗೆ ಸಂಬಂಧಿಸಿದಂತೆ ಗೂಗಲ್ ಹಾಗೂ ಕೆಲ ಸಾಮಾಜಿಕ ಜಾಲತಾಣ ದೈತ್ಯ ಕಂಪನಿಗಳು ಮಾಹಿತಿ ನೀಡಬೇ ಕೆಂದು ದೆಹಲಿ ಪೊಲೀಸರು ಕೇಳಿ ದ್ದರು. ಖಲಿಸ್ತಾನಿ ಪರ ಇರುವವರು ಟೂಲ್ ಕಿಟ್ ಮೂಲಕ ಭಾರತ ಸರ್ಕಾರದ ವಿರುದ್ಧ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ದಾಳಿ ನಡೆಸಲು ಸಂಚು ನಡೆಸಿದ್ದಾರೆ ಎಂದು ಸೈಬರ್ ದಳ ಎಫ್.ಐ.ಆರ್. ದಾಖಲಿಸಿದೆ.

## ಕನ್ನಡ ಜಾನಪದ ನೃತ್ಯ ಸ್ಪರ್ಧೆ

ದಾವಣಗೆರೆ, ಫೆ.14- ಸ್ಥಳೀಯ ವಿದ್ಯಾನಗರ-ವಿನಾಯಕ ಬಡಾವಣೆಯ ವಿನೂತನ ಮಹಿಳಾ ಸಮಾಜದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮಾರ್ಚ್ 17 ರಂದು ಬುಧವಾರ ಮಧ್ಯಾಹ್ನ 2 ಗಂಟೆಗೆ ಜಾನಪದ ನೃತ್ಯ ಸಂಭ್ರಮ ಕಾರ್ಯಕ್ರಮ ನಡೆಯಲಿದ್ದು, ಅಂದು ಕರ್ನಾಟಕ ಜಾನಪದ ನೃತ್ಯ ಸ್ಪರ್ಧೆಯನ್ನೂ ಸಹ ಏರ್ಪಡಿಸಲಾಗಿದೆ.

20 ವರ್ಷ ಮೇಲ್ಪಟ್ಟ ಮಹಿಳೆಯರು ಭಾಗವಹಿಸಲು ಅವಕಾಶವಿದೆ. ಆಸಕ್ತರು 94800 65748 ಅಥವಾ 96638 23664 ಕ್ಕೆ ಕರೆ ಮಾಡಿ ಹೆಸರು ನೋಂದಾಯಿಸುವಂತೆ ಶ್ರೀಮತಿ ರೇಖಾ ಓಂಕಾರಪ್ಪ ಕೋರಿದ್ದಾರೆ.


















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte